


# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 07 Issue : 138 Monday 03-02-2025 E-mail : maruti.b.hosamani76@gmail.com Page: 4 Price : Rs. 1/-


## ವಿದ್ಯಾರ್ಥಿಗಳ ವೃದ್ಧಿಗೆ ಶಿಕ್ಷಕರ ಕೊಡುಗೆ ಅಪಾರ ಶಾಸಕ ಹಂಪಯ್ಯ ನಾಯಕ



**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯಲ್ಲಿ ಕಲಿತ ವಿದ್ಯಾರ್ಥಿಗಳು ವೃದ್ಧಿ ಯಾಗುವುದರಲ್ಲಿ ಮೊದಲಿಗರು ಯಾರು ಎಂದರೆ ಶಿಕ್ಷಕರು ಎಂದು ಶಾಸಕ ಹಂಪಯ್ಯ ನಾಯಕ ತಿಳಿಸಿದರು.

ಪಟ್ಟಣದ ನೇತಾಜಿ ಶಿಕ್ಷಣ ಸಂಸ್ಥೆಯ ಬೆಳ್ಳಿ ಮಹೋತ್ಸವ ಸಂಭ್ರಮ ಹಾಗೂ ಹಳೆ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮದಲ್ಲಿ ನೇತಾಜಿ ನೆರಳು ಎನ್ನುವ ಸ್ಮರಣ ಸಂಚಿಕೆಯನ್ನು ಶುಕ್ರವಾರ ಬಿಡುಗಡೆ ಗೊಳಿಸಿ ಮಾತನಾಡಿದರು.

ಗುಣಮಟ್ಟದ ಶಿಕ್ಷಣವನ್ನು ನೀಡುವ ಉದ್ದೇಶ ದಿಂದ ಪ್ರಾರಂಭವಾದ ನೇತಾಜಿ ಸಂಸ್ಥೆಯು ಪ್ರಾಥಮಿಕ ಶಿಕ್ಷಣ ದಿಂದ ಕಾಲೇಜು ಹಂತದವರೆಗೂ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡುತ್ತಿದ್ದು. ಸಂಸ್ಥೆಯ ಅಧ್ಯಕ್ಷ ಕೆ.ಈ ನರಸಿಂಹ ವಿಜಯಲಕ್ಷ್ಮಿ ದಂಪತಿಗಳು ಶಿಕ್ಷಣ ಸಂಸ್ಥೆಯನ್ನು ಕಟ್ಟುವುದಕ್ಕೆ ಶ್ರಮಿಸಿದ್ದಾರೆಂದು ಬಣ್ಣಿಸಿದರು.

ಶಿಕ್ಷಣ ಸಂಸ್ಥೆ ನಡೆದು ಬಂದ ಹಾದಿಯನ್ನು ನೇತಾಜಿ ನೆರಳು ಸ್ಮರಣ ಸಂಚಿಕೆ ಒಳಗೊಂಡಿದ್ದು ಒಂದು ಉತ್ತಮ ಶಿಕ್ಷಣ ಸಂಸ್ಥೆಯನ್ನು ಯಾವರೀತಿ ಕಟ್ಟಬೇಕು ಎನ್ನುವ ಸಂಪೂರ್ಣ ವಿವರವನ್ನು ಕೃತಿಯಲ್ಲಿ ವಿವರಿಸಲಾಗಿದೆ. ಇಲ್ಲಿಯ ಶಿಕ್ಷಕರು ಕೂಡ ಸಮರ್ಪಣಾ ಮನೋಭಾವದಿಂದ ಶ್ರಮಿಸುತ್ತಿರುವುದರಿಂದ ಸಂಸ್ಥೆಯು ಬೆಳೆಯುವುದಕ್ಕೆ ಸಾಧ್ಯವಾಗಿದೆ ಎಂದರು.


**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಶಿವಾನಂದ ನಗರ ಓವರ್ ಹೆಡ್ ಟ್ಯಾಂಕ್ ಸ್ವಚ್ಚತೆಯ ಮರೀಚಿಕೆ ಜನರ ಆಕ್ರೋಶ

**ಸಿಹಿ ಕಹಿ ಸುದ್ದಿ,**

**ರೋಣ :** ಪಟ್ಟಣದ 16 ನೇ. ವಾರ್ಡ್ನಲ್ಲಿರುವ ಓವರ್ ಹೆಡ್ ಟ್ಯಾಂಕ್ ತುಂಬಿದ ಮೇಲೆ ಹೆಚ್ಚುವರಿ ನೀರು ಸುವ್ಯಸ್ಥಿತವಾಗಿ ಹರಿದು ಹೋಗಲು ವ್ಯವಸ್ಥೆ ಇಲ್ಲದಿರುವುದರಿಂದ ಪಕ್ಕದ ಖಾಲಿ ಜಾಗದಲ್ಲಿ ನೀರು ನಿಂತು ಕೆರೆಯಂತೆ ನಿರ್ಮಾಣವಾಗಿದೆ. ಇದರಿಂದಾಗಿ ಆ ನೀರು ನಿಂತ ಜಾಗ ಸೊಳ್ಳೆಗಳ ವಾಸ ಸ್ಥಳವಾಗಿದೆ ಸಂಜೆ-ಯಾದರೆ ಸಾಕು ಇಲ್ಲಿ ಸೊಳ್ಳೆಗಳ ಕಾಟ ಎಲ್ಲ ಮನೆಗಳಿಗೆ ತಪ್ಪಿದ್ದಲ್ಲ ಅದೆಷ್ಟು ಜನರು ಮಲೇರಿಯಾ ರೋಗದಿಂದ ಬಳಲಿ ವಾಸಿಯಾದವರು ಇದ್ದಾರೆ.

ಶಿವಾನಂದ ನಗರದ ಮುಖ್ಯ ರಸ್ತೆಯ ಪುರಸಭೆ ಮಳಿಗೆಗಳ ಹಿಂಭಾಗದಲ್ಲಿ ಓವರ್ ಹೆಡ್ ಟ್ಯಾಂಕ್ ಇದ್ದು ಅದರ ಪಕ್ಕದಲ್ಲಿಯೇ ರಾಜ ಕಾಲುವೆ ಕೂಡ ಇದೆ. ಟ್ಯಾಂಕ್ ತುಂಬಿದ ಮೇಲೆ ಹೆಚ್ಚುವರಿ ನೀರು ರಾಜ ಕಾಲುವೆಗೆ ಹರಿದು ಹೋಗುವಂತೆ ವ್ಯವಸ್ಥೆ ಮಾಡಿ ಎಂದು ಸದಸ್ಯ ಸಂತೋಷ ಕಡಿವಾಲ ಅವರು ಪುರಸಭೆ ಮುಖ್ಯಾಧಿಕಾರಿಗೆ ಹಲವು ಬಾರಿ ಹೇಳಿದ್ದು. ಇದುವರೆಗೂ



ಮುಖ್ಯಾಧಿಕಾರಿ ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ. ತುಂಬಿದ ಮೇಲೆ ನೀರು ಪಕ್ಕದ ಖಾಲಿ ಜಾಗದಲ್ಲಿ ಶೇಖರಣೆಯಾಗಿ ಕೆರೆಯಂತಾಗಿದೆ. ಇದರಲ್ಲಿ ದನ-ಕರುಗಳು ಸೇರಿದಂತೆ ಹಂದಿಗಳ ಹಾವಳಿ ಹೆಚ್ಚಾಗಿದ್ದು ನೀರು ಕಲುಷಿತ ಗೊಂಡು ಸೊಳ್ಳೆಗಳು ಉತ್ಪತ್ತಿಯಾಗುತ್ತಿವೆ. ಅಕ್ಕ ಪಕ್ಕದಲ್ಲಿ ಶಿವಾನಂದ ನಗರ ಮತ್ತು ಕೆ.ಇ.ಬಿ ಕಾಲೊನಿಗಳ ಮನೆಗಳಿದ್ದು ಸೊಳ್ಳೆಗಳ ಕಾಟ ವಿಪರೀತವಾಗಿದ್ದು, ಇದರಿಂದ ಹಲವು ಸಾಂಕ್ರಾಮಿಕ ರೋಗದ ಭೀತಿ ಎದುರಾಗಿದೆ. ಪುರಸಭೆ ಅಧಿಕಾರಿಗಳು ಕ್ರಮ ಕೈಗೊಳ್ಳದಿರುವುದು ಅಲ್ಲಿನ ನಿವಾಸಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಅಷ್ಟೇ ಅಲ್ಲ ಇಲ್ಲಿ ಯಾವುದೇ ರೀತಿಯ ಸ್ವಚ್ಚತಾ ಕಾರ್ಯ ನಡೆಯದೆ ಅಲ್ಲಲ್ಲಿ ಜಾಲಿ ಕಂಟಿಗಳು ಬೆಳೆದು ಹಲವಾರು ಸರಿಸೃಪಗಳ ವಾಸ ಸ್ಥಳವಾಗಿದೆ

'ಓವರ್ ಹೆಡ್ ಟ್ಯಾಂಕ್ ಪಕ್ಕದಲ್ಲಿಯೇ ರಾಜ ಕಾಲುವೆ ಇದ್ದರೂ ಹೆಚ್ಚುವರಿ ನೀರು ರಾಜ ಕಾಲುವೆಗೆ ಹರಿಯಲು ವ್ಯವಸ್ಥೆ ಮಾಡಿ ಎಂದು ಹಲವು ಬಾರಿ ಮುಖ್ಯಾಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಪುರಸಭೆ 16 ನೇ. ವಾರ್ಡ್ ಸದಸ್ಯ ಸಂತೋಷ ಕಡಿವಾಲ ತಿಳಿಸಿದ್ದಾರೆ. ನಮ್ಮ ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ವರದಿ ಕಂಡ ಮೇಲಾದರೂ ಈ ಸಮಸ್ಯೆ ಬಗೆಹರಿಯುವುದಾ ಕಾಯ್ದು ನೋಡೋಣ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಸ್.ವಿ ಸಂಕನಗೌಡ್ರ ರೋಣ ಗದಗ**

## ಉಪ ಅರಣ್ಯ ಸಂರಕ್ಷಣಾ ಅಧಿಕಾರಿಗಳಿಂದ ವನಸಿರಿ ಅಮರೇಗೌಡ ಮಲ್ಲಾಪುರ ಅವರಿಗೆ ಪ್ರಶಂಸನೀಯ ಪತ್ರ

**ರಾಯಚೂರು :** ರಾಯಚೂರು ಜಿಲ್ಲೆಯಾದ್ಯಂತ ಪರಿಸರ ಚಟುವಟಿಕೆಗಳನ್ನು ಕೈಗೊಂಡು ಶಾಲಾ ಆವರಣ, ಸಂಘ ಸಂಸ್ಥೆಗಳು ಮತ್ತು ಇತರೆ ಸಾರ್ವಜನಿಕ ಪ್ರದೇಶಗಳಲ್ಲಿ ಹೆಚ್ಚಿನ ಗಿಡಗಳನ್ನು ನೆಟ್ಟು ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಮೂಡಿಸಿ ಪರಿಸರ ಸಮತೋಲನ ಕಾಪಾಡುವಲ್ಲಿ ಹೆಚ್ಚಿನ ಶ್ರಮ ವಹಿಸಿರುವುದು ಕಂಡು ಬಂದಿರುತ್ತದೆ. ಅರಣ್ಯ ಇಲಾಖೆಯ ಕಾರ್ಯಕ್ರಮಗಳಾದ ಕೃಷಿ ಅರಣ್ಯ ಕಾಮಗಾರಿಗಳ ಕುರಿತು ಇಲಾಖೆ ಅಧಿಕಾರಿಗಳ ಸಂಪರ್ಕ ದೊಂದಿಗೆ ರೈತ ಬಾಂಧವರಿಗೆ ಹೆಚ್ಚಿನ ಮನವರಿಕೆ ಮಾಡಿಕೊಟ್ಟು ಹೆಚ್ಚು ಹೆಚ್ಚು ಕೃಷಿ ಅರಣ್ಯ ಕಾಮಗಾರಿಗಳನ್ನು ಕೈಗೊಂಡಿರು ವುದರಲ್ಲಿ ವನಸಿರಿ ಅಮರೇಗೌಡ ಮಲ್ಲಾಪುರ ಅವರ ಪಾತ್ರ ಶ್ಲಾಘನೀಯವಾಗಿರುತ್ತದೆ. ಈ ರೀತಿಯಾಗಿ ಕಾರ್ಯ ಪ್ರವೃತ್ತರಾಗಿರುವುದು ಕಂಡು ಬಂದಿರುತ್ತದೆ. ಆದುದ-ರಿಂದ ಇವರ ಕಾರ್ಯ-ಕ್ಕೆ ಅರಣ್ಯ ಇಲಾಖೆ ವತಿಯಿಂದ ಅಭಿನಂದನೆಗಳನ್ನು ಸಲ್ಲಿಸುವ ಮೂಲಕ ಈ ಪ್ರಶಂಸನೀಯ ಪತ್ರ ನೀಡಿ ಗೌರವಿಸಲಾಗುವುದು ಎಂದು ರಾಯಚೂರು ಉಪ ಸಾಮಾಜಿಕ ಅರಣ್ಯ ವಿಭಾಗದ ಸಂರಕ್ಷಣಾ ಅಧಿಕಾರಿಗಳಾದ ಸುರೇಶ ಬಾಬು ಅವರು ರಾಯಚೂರಿನ ಉಪ ಅರಣ್ಯ ಸಂರಕ್ಷಣಾ ಅಧಿಕಾರಿಗಳ ಕಛೇರಿಯಲ್ಲಿ ವನಸಿರಿ ಫೌಂಡೇಷನ್ ರಾಜ್ಯಾಧ್ಯಕ್ಷರಾದ ಅಮರೇಗೌಡ ಮಲ್ಲಾಪುರ ಹಾಗೂ ಅವರ ತಂಡದ ಸದಸ್ಯರಿಗೆ ಪ್ರಶಂಸನೀಯ ಪತ್ರ ನೀಡಿ ಗೌರವಿಸಿ ಅಭಿನಂದಿಸಲಾಯಿತು.

ಈ ಸಂಧರ್ಭದಲ್ಲಿ ಉಪ ಅರಣ್ಯ ಸಂರಕ್ಷಣಾ ಅಧಿಕಾರಿಗಳಾದ ರಮೇಶ ಬಾಬು, ವನಸಿರಿ ತಂಡದ ಸದಸ್ಯರಾದ ಶಂಕರಗೌಡ ಎಲೆಕೊಡ್ಲಿಗಿ, ಗಿರಿಸ್ವಾಮಿ ಹೆಡಗಿನಾಳ, ರಾಯಚೂರ ಸಾಮಾಜಿಕ ಅರಣ್ಯ ಇಲಾಖೆ ನಾಗರಾಜ ಇದ್ದರು.



## ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿಗಳು ಶ್ರೀ ಹೆಚ್.ಎನ್ ನಾಗಮೋಹನ್ ದಾಸ್‌ರವರು ಏಕಸದಸ್ಯ ವಿಚಾರಣಾ ಆಯೋಗಕ್ಕೆ - ಕರ್ನಾಟಕ ರಾಜ್ಯ ಸಮಗಾರ (ಚಮ್ಮಾರ) ಹರಳಯ್ಯ ಸಮಾಜ ಒಳ ಮೀಸಲಾತಿ ಯಿಂದ ಮನವಿ ಸಲ್ಲಿಸಿದರು

**ಸಿಹಿ ಕಹಿ ಸುದ್ದಿ,**

**ಬೆಂಗಳೂರು :** ಕರ್ನಾಟಕ ರಾಜ್ಯ ಸಮಗಾರ, (ಚಮ್ಮಾರ) ಹರಳಯ್ಯ ಸಮಾಜ ಒಳ ಮೀಸಲಾತಿ ಹೋರಾಟ ಸಮಿತಿ ಹಾಗೂ ಮಾದಿಗ-ಸಮಗಾರ-ಮಚಗಾರ-ಡೋಹರ-ಡಕ್ಕಲಿಗ ಜಾತಿ ಉಪಜಾತಿ ಸಂಘಟನೆಗಳ ಒಕ್ಕೂಟ, ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ವರದಿ ಜಾರಿ ಹೋರಾಟ ಸಮಿತಿ, ಬಹುಜನ ಸಮಾಜ ಪಾರ್ಟಿ, ಒಳ ಮೀಸಲಾತಿಗಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ, ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟರ ಒಳ ಮೀಸಲಾತಿ ಒಕ್ಕೂಟ, ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ), ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ಈ ರೀತಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ನಾವು3ದಶಕದಿಂದಲೂಒಳಮಿಸಲಾತಿಗಾಗಿ ಹೋರಾಡುತ್ತಲೇ ಬಂದಿದ್ದೇವೆ.

ಕಳೆದ ಹಿಂದಿನ ಎಲ್ಲಾ ಸರ್ಕಾರದ ಮುಂದೆ ಒಳ ಮೀಸಲಾತಿಗಾಗಿ ಮನವಿ ಸಲ್ಲಿಸುವ ಸಂದರ್ಭದಲ್ಲಿ ಭಾಗಿಯಾಗಿದ್ದೇವೆ. ಕರ್ನಾಟಕದ 101 ಪರಿಶಿಷ್ಟ ಜಾತಿಗಳ ವರ್ಗೀಕರಣವುಮಾನ್ಯನ್ಯಾಯಮೂರ್ತಿಎ.ಜೆ ಸದಾಶಿವ ರವರ ಆಯೋಗದ ಶಿಫಾರಸ್ಸಿನಲ್ಲಿ ಸರಿಯಾದ ದತ್ತಾಂಶಗಳ ಆಧಾರದ ಮೇಲೆ ವಿವರಣೆಯನ್ನುಮಾಡಲಾಗಿದೆ.ಈಹಿಂದೆ-ಯೇ ಕೇಂದ್ರ ಸರ್ಕಾರದ ನಿರ್ದೇಶನದಂತೆ ಕರ್ನಾಟಕದಲ್ಲಿ ಚರ್ಮಕಾರರು ಯಾರು ಎಂಬುವ ಶಿಫಾರಸ್ಸಿನಂತೆ ವರದಿಯಲ್ಲಿ "ಬಾಂಬಿ" ಎಂಬ ಕಾಲಂ ನಲ್ಲಿ ಪುಟ ಸಂಖ್ಯೆ 119 ರಲ್ಲಿ ಬಾಂಬಿ, ಅಸಾದರು. ಅಸಾದಿ, ಚಮಾಡಿಯಾ, ಚಮಾರ್, ಚಾಂಬಾರ್, ಚಮಗಾರ, ಹರಳಯ್ಯ, ಹರಳಿ, ಕಲ್ಪಾ, ಮಚಿಗಾರ,ಮೋಚಿಗಾರ,ಮಾದರ,ಮಾದಿಗ. ಮೋಚಿ, ಮಚಿ, ತೆಲಗು ಮೋಚಿ, ಕಾಮಾಟಿ ಮೋಚಿ, ರಾಣೆಗಾರ್, ರೋಹಿದಾಸ್, ರೋಹಿತ್, ಸಮಗಾರ್ ಎಂದು ಚರ್ಮ ವೃತ್ತಿ ಆಧಾರಿತ ಜಾತಿಗಳು ಎಂದು ಒಂದೇ ಗುಂಪಿನಲ್ಲಿಗುರ್ತಿಸಿರುವುದು ಸರಿ ಇರುತ್ತದೆ. ಈ ಸಂದರ್ಭದಲ್ಲಿ ಆಯಾ ಜಾತಿ ಉಪ ಜಾತಿಗಳ ಸಂಖ್ಯೆಯನ್ನು ಪ್ರತ್ಯೇಕವಾಗಿ ಗುರ್ತಿಸುವುದು ಕಷ್ಟ ಸಾಧ್ಯವಾಗುತ್ತದೆ. ಸಮಗಾರರಲ್ಲಿ ಆಯೋಗದ ವರದಿ ಪ್ರಕಾರ ಸಮಗಾರ,ಬಾಂಬಿ,ಚಮಾಡಿಯಾ,ಚಮಾರ್, ಚಾಂಬಾರ್, ಚಮಗಾರ, ಹರಳಯ್ಯ, ಹರಳಿ, ಕಲ್ಪಾ, ರೋಹಿದಾಸ್, ರೋಹಿತ್ ಒಟ್ಟು 11 ಉಪನಾಮಗಳಿವೆ. ಇವಲ್ಲದೇ ಅಂಗವಂತ ಸಮಗಾರ. ಆರ್ಯ ಸಮಗಾರ ಇನ್ನೂ ಹಲವು ಉಪ ನಾಮಗಳನ್ನು ಹೊಂದಿದ್ದಾರೆ ಮತ್ತು ಮಾದಿಗ-ಸಮಗಾರ-ಮಚಗಾರ-ಡೋಹರ ಜಾತಿಗಳು ಮೂಲ ಅಸ್ಪೃಶ್ಯ ಜಾತಿಗಳು ಒಂದನ್ನೊಂದು ಅವಲಂಬಿಸಿ ತಮ್ಮ ಬದುಕು ಕಂಡು ಕೊಂಡಿದ್ದಾರೆ.

ಕರ್ನಾಟಕ ರಾಜ್ಯದ ಮೂಲ ಅಸ್ಪೃಶ್ಯರು ಎಂದರೆ ಪಂಚಮರು 1) ಹೊಲೆಯ 2) ಮಾದಿಗ 3) ಸಮಗಾರ 4) ಮಚಗಾರ 5) ಡೋಹರರಾಗಿದ್ದಾರೆ.ಆದರೆಈಗಬೇರೆಬೇರೆ ಸ್ಪೃಶ್ಯ ಜಾತಿಗಳು ಸೇರಿ 101 ಜಾತಿಗಳಾಗಿವೆ. ಈ ಮೇಲಿನ 5 ಜಾತಿಗಳಿಗೆ ಅವರದೇ ಆದ ಉಪನಾಮಗಳುಅಥವಾಉಪಜಾತಿಗಳನ್ನು ಹೊಂದಿದಜಾತಿಗಳುಸಹಪಟ್ಟಿಯಲ್ಲಿಸೇರಿಸಿ ಕೊಂಡಿರುವುದರಿಂದ ಇದನ್ನೇ ಗೊಂದಲ ಮಯವಾಗಿ ಕೆಲವರು ಬಿಂಬಿಸುತ್ತಿದ್ದಾರೆ. ಸದಾಶಿವ ಆಯೋಗದ ಶಿಪಾರಸ್ಸಿನಂತೆ 49 ಜಾತಿಗಳನ್ನು "ಎ" ಗುಂಪಿಗೆ ಸೇರಿಸಿದ್ದು, ಅದರಲ್ಲಿ ಮಾದಿಗ ಜಾತಿಗೆ ಸೇರಿದ ಉಪ ನಾಮಗಳು ಎಂದರೆ 1) ಆದಿ ಅಂಧ್ರ 2) ಆದಿ ದ್ರಾವಿಡ 3) ಆದಿ ಕನಾಟಕ 4) ಮಾದಿಗ 5) ಮಾದರ್ 6) ಮಾತಂಗ 7) ಮಾದರಿ 8) ಮಾಂಗ್ 9) ತೋಟಿ 10) ಎಡಗೈ 11) ಜಾಂಬುವುಲು 12) ಅರುಂದತಿಯಾರ್ 13) ದಕ್ಕಲಿಗ 14) ಚಾಂಡಾಲ 15) ??? 16) 17) ? 18) 08 19) ??????? (20) ದೊಕ್ತಲವಾರ್ 21) ಜಗ್ಗಲಿ 22) ಕಡಿಯಾರ್ 23) ಮಾಚಾಲ 24) ಮಿನಿಮಾದಿಗ 25) ಮಾಂಗ್ ಗಾರುಡಿ 26) ಮನ್ನೆ 27) ಪಂಚಮ 28) ಸಂಬನ್ 29) ಸಿಂದೊಳ್ಳು ಒಟ್ಟು 29 ಹಾಗೂ ಸಮಗಾರ ಜಾತಿಗೆ ಸೇರಿದ ಉಪ ನಾಮಗಳು 1) ಸಮಗಾರ 2) ಬಾಂಬಿ 3) ಚಮಾಡಿಯ 4) ಚಮಾರ್ 5) ಚಂಬಾರ್ 6) ಚಮಗಾರ್ 7) ಹರಳಯ್ಯ 8) ಹರಳಿ 9) ಕಲ್ಪಾ 10) ರೋಹಿದಾಸ್ 11) ರೋಹಿತ್ ಒಟ್ಟು 11 ಉಪ ನಾಮಗಳು. ಮಚಗಾರರಲ್ಲಿ 1) ಮಚಿಗಾರ 2) ಮೋಚಿಗಾರ್. 3) ಮೋಚಿ 4) ಮಚಿ 5) ತೆಲಗು ಮೋಚಿ 6) ಕಾಮಾಟಿ ಮೋಚಿ ಎಂದು 6 ಉಪ ನಾಮಗಳು ಮತ್ತು ಡೋಹರರಲ್ಲಿ 1) ಡೋರ್ 2) ಕಕ್ಕಯ್ಯ 3) ಕಂಕಯ್ಯ ಎಂದು 3 ಉಪ ನಾಮಗಳನ್ನು ಹೊಂದಿದೆ. ಈ ರೀತಿ ಒಟ್ಟು 49 ಉಪ ಪಂಗಡಗಳ ಹೆಸರಿನಲ್ಲಿ ಕರೆಯಲ್ಪಡುತ್ತಾರೆ.

ಈ ರೀತಿ ಚರ್ಮಗಾರಿಕೆ ಕುಲವೃತ್ತಿ ಆಧಾರದ ಮೇಲೆಹಾಗೂಡಾ.ಬಾಬುಜಗಜೀವನ್ರಾಮ್ ರವರನ್ನು ನಮ್ಮ ನಾಯಕರೆಂದು ಒಪ್ಪಿಕೊಳ್ಳುವ ಇವರೆಲ್ಲರನ್ನೂ ಒಂದೇ ಗುಂಪಿಗೆ ಸೇರಿಸಿದ್ದು, ಇದನ್ನು ಮುಂದುವರಿಸಲು ನಮ್ಮ ಒತ್ತಾಯವಿದೆ. ನ್ಯಾಯಮೂರ್ತಿ ಎ.ಜೆ ಸದಾಶಿವ ಆಯೋಗವು ಬಾಗಲಕೋಟೆಗೆ ದಿನಾಂಕ:17.10.2006ರಂದುಭೇಟಿನೀಡಿದ ಸಮಯದಲ್ಲಿ ಸಮಗಾರ ಸಮಾಜದಿಂದ ಅಂದು ದ.ಸಂ.ಸ ಜಿಲ್ಲಾ ಸಂಚಾಲಕರಾಗಿದ್ದ ವೈ.ಸಿ.ಕಾಂಬಳಿ ಹಾಗೂ ಸಮಾಜದ ಮುಖಂಡರಾದ ಯಲ್ಲಪ್ಪ ಬೆಂಡಿಗೇರಿ, ಅಶೋಕ್ ಕಲಾದಗಿ ಮುಂತಾದವರು ಭಾಗವಹಿಸಿದ್ದು, ಅಂತೆಯೇ ಗದಗ ಜಿಲ್ಲೆಗೆ ದಿನಾಂಕ: 27.07.2006 ರಂದು ಭೇಟಿ ನೀಡಿದಾಗ ಸಮಗಾರ ಸಮಾಜದ ಎಲ್.ಡಿ.ಚಂದಾವರಿ, ರಮೇಶ್ ತೇರದಾಳ್, ಶಿವಮೂರ್ತೆಪ್ಪ ಅಗಸಿಮನಿ, ವೆಂಕಟೇಶ್ ಎಂ ನರಗುಂದ, ಪರಶುರಾಮ್ ಅಗಸಿಮನಿ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಚಪ್ಪ ಜೋಗಳೇಕರ್ ಭಾಗವಹಿಸಿದ್ದಲ್ಲದೆ, ಉಡುಪಿ, ದಕ್ಷಿಣ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು,ವಿಜಯಪುರ,ಧಾರವಾಡ, ಬೆಳಗಾವಿ, ಹಾವೇರಿ, ಗುಲ್ಬರ್ಗ, ಬೀದರ್, ಕೊಪ್ಪಳ ಮುಂತಾದ ಜಿಲ್ಲೆಯಲ್ಲಿ ಸಮಾಜದ ಮುಖಂಡರು ಭಾಗವಹಿಸಿ ಒಳ ಮೀಸಲಾತಿ ವರ್ಗೀಕರಣವನ್ನು ಬೆಂಬಲಿಸಿದ್ದರು.

ಛ ಸಮಗಾರರನ್ನು ಭಾರತದ ವಿವಿಧ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಆದರೆ ರಾಷ್ಟ್ರ ಮಟ್ಟದಲ್ಲಿ ಚಮ್ಮಾರರು ಎಂದು ಇವರನ್ನು ಕರೆಯುತ್ತಾ-ರೆ. ಸಂತ ರವಿದಾಸ, ಸಂತ ಘಾಸಿದಾಸ್, ಶರಣ ಹರಳಯ್ಯ- ಕಲ್ಯಾಣಮ್ಮ, ಶೀಲವಂತ ಹಾಗೆಯೇ ರಾಷ್ಟ್ರೀಯ ನಾಯಕರಾದ ಡಾ. ಬಾಬು ಜಗಜೀವನರಾಮ್, ಕಾಶ್ಮೀರಾಮ್, ಅಕ್ಕ ಮಾಯಾವತಿ, ಮೀರಾಕುಮಾರಿ ಇದೇ ಸಮುದಾಯಕ್ಕೆ ಸೇರಿದವರಾಗಿರುತ್ತಾರೆ.

ಆದರೆ,ಕರ್ನಾಟಕರಾಜ್ಯದಲ್ಲಿರುವಸಮಗಾರ ಸಮಾಜ ಬಹು ಹಿಂದಿನಿಂದಲೂ ಅಸ್ಪೃಶ್ಯತೆ, ಜಾತೀಯತೆಯಿಂದ ನಲುಗಿ ಹೋಗಿದೆ. ಇವರು ಕಾಯಕ ಜೀವಿಗಳಾಗಿ ರುವುದರಿಂದ ಪಾದರಕ್ಷೆಯ ತಯಾರಿಕೆ. ರಿಪೇರಿ ಮತ್ತು ಮಾರಾಟವನ್ನು ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ.

ಇತ್ತೀಚಿನ ಆಧುನಿಕ ವ್ಯವಸ್ಥೆಯಲ್ಲಿ ಕುಲ ಕಸುಬು ತನ್ನ ಅಸ್ತಿತ್ವವನ್ನು ಕಳೆದು ಕೊಳ್ಳುತ್ತಿರುವುದರಿಂದಜೀವನನಡೆಸುವುದು ಕಷ್ಟಕರವಾಗಿದೆ. ಅಲ್ಪ ಸ್ವಲ್ಪ ವಿದ್ಯೆ ಕಲಿತರೂ ಸರಿಯಾದ ಕೆಲಸವಿಲ್ಲದೆ ನಿರುದ್ಯೋಗ, ಬಡತನ ದಿಂದ ಸಮಾಜವು ಬಳಲುತ್ತಿದೆ. ಇವರಿಗೆ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ,ಔದ್ಯೋಗಿಕವಾಗಿಬಲಾಡ್ಯ ಜಾತಿಗಳೊಂದಿಗೆಸ್ಪರ್ಧೆಗೆಇಳಿಯಲುಆಗದೆ ಅತಂತ್ರಸ್ಥಿತಿಯಲ್ಲಿದ್ದಾರೆ.ಇಂತಹಸ್ಥಿತಿಯಲ್ಲಿ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿಯು ಜಾರಿಯುತೀರವಿಳಂಬವಾಗಿರುವುದರಿಂದ ಈ ಜನಾಂಗವು ಇನ್ನಷ್ಟು ಸಂಕಷ್ಟದಲ್ಲಿದೆ. ಪರಿಶಿಷ್ಟ ಜಾತಿಯ ಶೇ. 15 ರಿಂದ ಶೇ 17 ಕ್ಕೆ ಮೀಸಲಾತಿಯನ್ನು ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ. ಹೆಚ್.ಎನ್ ನಾಗಮೋಹನ್ ದಾಸ್ ರವರ ಶಿಫಾರಸ್ಸಿನ ಕೃಪೆಯಿಂದ ಹೆಚ್ಚಳವಾಗಿರುತ್ತದೆ. ಈಗ ಹೆಚ್ಚಳವಾದಶೇ.2ಪ್ರತಿಶತಮೀಸಲಾತಿಯಲ್ಲಿ ತೀರಾ ಹಿಂದುಳಿದಿರುವ, ಅಸ್ಪೃಶ್ಯತೆಗೆ ಗುರಿಯಾಗಿರುವ ಎಡಗೈ ಗುಂಪಿಗೆ ಶೇ. 5 ರಿಂದ ಶೇ 7 ಕ್ಕೆ ಹೆಚ್ಚಳ ಗೊಳಿಸಿ ಶಿಪಾರಸ್ಸು ಮಾಡಲು ವಿನಂತಿ. ಈಗ ಸದರಿ ಎಡಗೈ ಗುಂಪಿಗೆ ಸಂಬಂಧಿಸಿದಂತೆ ವಿನಾಃ ಕಾರಣ ಶ್ರೀಗುರು ರವಿದಾಸ್ ಪರಿಷತ್ ಹಾಗೂ ಅಖಿಲಕರ್ನಾಟಕಚರ್ಮಕಾರಮಹಾಸಭಾ ಸಂಘದವರು ತ್ರಿಮಸ್ಥ ಎಂದು ಸಮಗಾರ-ಮಚಗಾರ ಮತ್ತು ಡೋಹರ ಜಾತಿಗಳ ಕುರಿತು ಗೊಂದಲವನ್ನು ಸೃಷ್ಟಿಸುತ್ತಿರುವುದು ಕಂಡುಬಂದಿದೆ. ಇವರ

ಪ್ರಮುಖ ಬೇಡಿಕೆಯೇ ರಾಜಕೀಯ ವಾಗಿರುವುದರಿಂದ ಈಗ ಸದ್ಯದಲ್ಲಿ ಜಾರಿಗೆ ಬರುತ್ತಿರುವ ಒಳ ಮೀಸಲಾತಿಯು ಕೇವಲ ಶಿಕ್ಷಣ ಮತ್ತು ಉದ್ಯೋಗ-ಕ್ಕೆ ಸೀಮಿತವಾಗಿರುವುದ ರಿಂದ ಅವರ ಪ್ರಶ್ನೆಗಳು ಈಗ ಅಪ್ರಸ್ತುತವಾಗಿವೆ. ಆದಾಗ್ಯೂ ಕೂಡ ಮಾದಿಗ-ಸಮಗಾರ-ಮಚಗಾರ-ಡೋಹರ ಜಾತಿಗಳ ಪ್ರಮುಖ ನಾಯಕರು ಸೇರಿಕೊಂಡು ಶಿಕ್ಷಣ-ಉದ್ಯೋಗ ಹೊರತು ಪಡಿಸಿ ರಾಜಕೀಯವಾಗಿ ಸೀಟು ಹಂಚಿಕೆ ಮತ್ತು ನಿಗಮ ಮಂಡಳಿ ನೇಮಕಾತಿ ಹಾಗೂ ವಿವಿಧ ಹುದ್ದೆಗಳ ನೇಮಕಾತಿ ವಿಚಾರದಲ್ಲಿ ಪರಸ್ಪರ ಜಾತಿಗಳಲ್ಲಿ ಸಮನ್ವಯ ತೆಯನ್ನು ಮುಂದುವರಿಸಿಕೊಂಡುಹೋಗುವುದಕ್ಕಾಗಿ ಈಗ ನಮ್ಮಲ್ಲಿಯೇ ಒಂದು ಸ್ವಾಮೀಜಿಗಳ ನೇತೃತ್ವದಲ್ಲಿ ಈ 4 ಜಾತಿಗಳ ನಾಯಕರ ಸಮನ್ವಯ ಸಮಿತಿಯು ಅಸ್ತಿತ್ವಕ್ಕೆ ಬಂದಿರುತ್ತದೆ. ಹೀಗಾಗಿ ಇನ್ನೂ ಮುಂದೆ ಈ ಜಾತಿಗಳಲ್ಲಿ ಯಾವುದೇ ರೀತಿ ಯಾದಂತಹ ಗೊಂದಲಗಳು ಮುಂದುವರಿಯುವ ಸಾಧ್ಯತೆಗಳು ಕ್ಷೀಣವಾಗಲಿವೆ. ಆದಕಾರಣ ಎಡಗೈಯಲ್ಲಿಯೇ ಪ್ರತ್ಯೇಕ ಗೊಳಿಸುವ ಅವರ ಬೇಡಿಕೆಯನ್ನು ಮಾನ್ಯ ಆಯೋಗವು ತಿರಸ್ಕರಿಸ ಬೇಕೆಂದು ಹಾಗೂ ಸರ್ಕಾರವು ಒಳ ಮಿಸಲಾತಿ ವರ್ಗೀಕರಣವನ್ನು ಆದಷ್ಟು ಶೀಘ್ರದಲ್ಲಿ ಜಾರಿಗೆ ತರಬೇಕೆಂದು ಪತ್ರಿಕಾ ಮಾಧ್ಯಮದಮೂಲಕಆಗ್ರಹಿಸಿತ್ತಿರುವವೈ.ಸಿ ಕಾಂಬಳಿರಾಜ್ಯಸಂಚಾಲಕರು,ಪರಮಾನಂದ ಹಳ್ಳೂರ, ವಸಂತ ಮನಗೂಳಿ, ಆನಂದ ಬೋರ್ಕರ್, ರಾವುತ್ ಜಕ್ಕಪ್ಪ ಸೌದಾಗರ ಮುಂತಾದವರು ಹಾಜರಿದ್ದರು.




## ಹಳಿಂಗಳಿಯಲ್ಲಿ ನೂತನ ಬ್ಯಾಂಕ್ ಉದ್ಘಾಟನೆ ದೇಶದ ಆರ್ಥಿಕ ಪ್ರಗತಿಗೆ ಬ್ಯಾಂಕುಗಳ ಕೊಡುಗೆ ಅನನ್ಯ



**ತೇರದಾಳ :** ದೇಶದ ಆರ್ಥಿಕ ಪ್ರಗತಿಗೆ ಸಹಕಾರಿ ಕ್ಷೇತ್ರದ ಕೊಡುಗೆ ಅನನ್ಯವಾಗಿದೆ. ಇಂದು ಜಾಗತಿಕ ಮಟ್ಟದಲ್ಲಿ ಭಾರತ ಹಣಕಾಸಿನ ವ್ಯವಸ್ಥೆಯಲ್ಲಿ ಸುಧಾರಣೆ ಆಗಿದ್ದರೆ ಅದು ಬ್ಯಾಂಕುಗಳಿಂದ ಎಂದು ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಶಾಸಕ ಸಿದ್ದು ಸವದಿ ಹೇಳಿದರು. ಹಳಿಂಗಳಿ ಗ್ರಾಮದಲ್ಲಿ ನೂತನ ಬಿ.ಆರ್. ಖವಟಕೊಪ್ಪ ಬ್ಯಾಂಕ್ ಉದ್ಘಾಟಿಸಿ ಮಾತನಾಡಿದರು.

ಸಹಕಾರಿ ಕ್ಷೇತ್ರದಲ್ಲಿ ಹಣಕಾಸಿನ ವ್ಯವಹಾರ ನಡೆಯುವುದು ಕೇವಲ ನಂಬಿಕೆಯಿಂದ. ಆದರೆ ಇಂದು ಅಂತಹ ನಂಬಿಕೆಗೆ ಕೆಲವು ಫೈನಾನ್ಸ್ ಹಾಗೂ ಬ್ಯಾಂಕುಗಳು ದ್ರೋಹ ಬಗೆಯುವ ಕೆಲಸ ಮಾಡುತ್ತಿರುವುದು ಪ್ರಾಮಾಣಿಕ ಬ್ಯಾಂಕುಳನ್ನು ಸಂಶಾಸ್ಪದವಾಗಿ ನೋಡುವಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ಭದ್ರಗಿರಿಯ ಆಚಾರ್ಯ ಕುಲರತ್ನಭೂಷಣ ಮಹಾರಾಜ, ಕಮರಿಮಠದ ಶಿವಾನಂದ ಶ್ರೀ ಮಾತನಾಡಿ ಬ್ಯಾಂಕ್‌ಗಳನ್ನು ಸ್ಥಾಪಿಸುವ ಮೂಲಕ ಬಡವರಿಗೆ ಆರ್ಥಿಕವಾಗಿ ನೆರವು ಆಗುವುದು ಕೂಡ ಒಂದು ಧರ್ಮವಾಗಿದೆ ಎಂದು ಬಣ್ಣಿಸಿದ ಅವರು, ಸಹಕಾರಿ ಕ್ಷೇತ್ರದಲ್ಲಿ ಪ್ರಾಮಾಣಿಕತೆ ಇದ್ದರೆ ಮಾತ್ರ ಬೆಲೆ ಎಂಬುದನ್ನು ಗ್ರಾಹಕರು ಹಾಗೂ ಸಂಸ್ಥೆಯವರು ಅರಿವು ಹೊಂದಿರಬೇಕೆಂದು ಹೇಳಿದರು.

ಬ್ಯಾಂಕ್ ಅಧ್ಯಕ್ಷ ಸುರೇಶ ಖವಟಕೊಪ್ಪ ಅಧ್ಯಕ್ಷತೆ ವಹಿಸಿದ್ದರು. ಗ್ರಾಪಂ ಅಧ್ಯಕ್ಷ ಪ್ರದೀಪ ನಂದೆಪ್ಪನವರ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ರಾಜು ನಂದೆಪ್ಪನವರ, ಭರಮು ಉಳ್ಳಾಗಡ್ಡಿ, ಧರೆಪ್ಪ ಖವಟಕೊಪ್ಪ, ಮಾಧುಗೌಡ ಪಾಟೀಲ, ಬಾಹುಬಲಿ ಚೌಗಲಾ ಇದ್ದರು.

## ಕಿಸಾನ ಘಟಕದ ಜಿಲ್ಲಾಧ್ಯಕ್ಷರಾಗಿ ಆನಂದ ಹಟ್ಟಿ ನೇಮಕ



**ಮಹಾಲಿಂಗಪುರ :** ಪಟ್ಟಣದ ನೇಕಾರ ಸಮುದಾಯದ ಯುವಮುಖಂಡ ಆನಂದ ಶ್ರೀಕಾಂತ ಹಟ್ಟಿ ಅವರು ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಕಿಸಾನ ಘಟಕದ ಅಧ್ಯಕ್ಷರನ್ನಾಗಿ ನೇಮಕಗೊಳಿಸಿ ಕಾಂಗ್ರೆಸ್ ಕಿಸಾನ ಘಟಕದ ರಾಜ್ಯಾಧ್ಯಕ್ಷ ಸಚೀನ ಮೀಗಾ ಆದೇಶ ಹೊರಡಿಸಿದ್ದಾರೆ.

ಬಾಗಲಕೋಟೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಸೋಮವಾರ ಜಿಲ್ಲಾಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅವರು ನೇಮಕಾತಿ ಆದೇಶ ಪತ್ರ ವಿತರಿಸಿ ಪಕ್ಷದ ವರಿಷ್ಠರ ಆದೇಶದಂತೆ ಮಹಾಲಿಂಗಪುರ ಪಟ್ಟಣದ ಯುವ ಮುಖಂಡ ಆನಂದ ಹಟ್ಟಿ ಅವರನ್ನು ಪಕ್ಷದ ಜಿಲ್ಲಾ ಕಿಸಾನ ಘಟಕದ ಅಧ್ಯಕ್ಷರನ್ನಾಗಿ ನೇಮಕಗೊಂಡಿದ್ದಾರೆ. ಅವರ ಅವಧಿಯಲ್ಲಿ ಕಿಸಾನ ಘಟಕದ ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಪಕ್ಷ ಸಂಘಟನೆ ಮತ್ತು ಅಭಿವೃದ್ದಿಗಾಗಿ ಶ್ರಮಿಸಿರಿ ಎಂದರು.

ಈ ಸಂದರ್ಭದಲ್ಲಿ ಸದುಗೌಡ ಪಾಟೀಲ, ವಿಠ್ಠಲ ಹೊಸಮನಿ, ಸಿದ್ದೂ ಭುಸನ್ನವರ ಸೇರಿದಂತೆ ಪಕ್ಷದ ಮುಖಂಡರು ಇದ್ದರು.

## ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಿರ್ಲಕ್ಷ್ಯದಿಂದಾಗಿ 10 ಕೋಟಿ ವ್ಯರ್ಥ



**ಕೆ.ಆರ್.ಪೇಟೆ :** ಹೊಸಹೊಳಲು ಚಿಕ್ಕಕೆರೆ ಅಭಿವೃದ್ಧಿ ಕಾಮಗಾರಿ ಅರ್ಧಕ್ಕೆ ನಿಂತಿದೆ ಹಾಳುಕೊಂಪೆಯಂತಾದ ಕೆರೆಯಂಗಳ. ಅಧಿಕಾರಿಗಳು ಮತ್ತು ಗುತ್ತಿಗೆದಾರರ ನಿರ್ಲಕ್ಷ್ಯದಿಂದಾಗಿ 10ಕೋಟಿ ವ್ಯರ್ಥ.

ಫುಟ್ ಪಾತ್ ವ್ಯವಸ್ಥೆ, ಬೋಟಿಂಗ್ ವ್ಯವಸ್ಥೆ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳು ನೆನೆಗುದಿದೆ.

ಐತಿಹಾಸಿಕ ಹೊಯ್ಸಳರ ಶಿಲ್ಪಕಲೆ ಹೊಂದಿರುವ ಹೊಸಹೊಳಲು ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯದ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಸಿಗದ ಸೌಲಭ್ಯಗಳು.

ಸಚಿವರಾಗಿದ್ದ ನಾರಾಯಣಗೌಡರ ಅವಧಿಯಲ್ಲಿ ಮಂಜೂರಾಗಿದ್ದ 10ಕೋಟಿ ರೂ ಅನುಧಾನ.

ಕಾಮಗಾರಿ ಆರಂಭವಾಗಿ ಮೂರು ವರ್ಷ ಕಳೆದರೂ ಪೂರ್ಣಗೊಳ್ಳದ ಕಾಮಗಾರಿ,

ಅತ್ತ ಪ್ರವಾಸಿಗರಿಗೂ, ಇತ್ತ ವಾಯು ವಿಹಾರಿಗಳಿಗೂ ಸಿಗದ ಕೆರೆ ಅಭಿವೃದ್ಧಿಯ ಉಪಯೋಗ.

ಕೂಡಲೇ ಕಾಮಗಾರಿ ಪೂರ್ಣಗೊಳಿಸುವಂತೆ ಪುರಸಭೆ ಸದಸ್ಯ ಎಚ್. ಆರ್. ಲೋಕೇಶ್ ಒತ್ತಾಯಿಸಿದ್ದಾರೆ.

**ವರದಿ :ಎಸ್ ರವಿ ಹೊನ್ನೇನಹಳ್ಳಿ**

## ವಿದ್ಯಾರ್ಥಿಗಳು ಹಾಗೂ ಯುವ ಜನರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮ ವಿಶ್ವಾಸದಿಂದ ಎದುರಿಸಿ ಸಾಧನೆ ಮಾಡಬೇಕು



**ಕೆ ಆರ್ ಪೇಟೆ:** ವಿದ್ಯಾರ್ಥಿಗಳು ಹಾಗೂ ಯುವ ಜನರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆತ್ಮ ವಿಶ್ವಾಸದಿಂದ ಎದುರಿಸಿ ಸಾಧನೆ ಮಾಡಬೇಕುಎಂದು ಕೆ.ಆರ್. ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಜಗಧೀಶ್ ಹೇಳಿದರು

ಅವರು ಕೆ.ಆರ್.ಪೇಟೆ ಪಟ್ಟಣದ ಬಿಜಿಎಸ್ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ವೃತ್ತಿಕೌಶಲ್ಯ ಮಾರ್ಗದರ್ಶನ ಕಾರ್ಯಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ದ್ವಿತೀಯ ಪಿಯುಸಿ ನಂತರ ಮುಂದೇನು, ಜೀವನದಲ್ಲಿ ಸಾಧನೆ ಮಾಡಲು ಯಾವ ಕೋರ್ಸ್ ಇಲ್ಲವೇ ಪದವಿ ವ್ಯಾಸಂಗ ಮಾಡಬೇಕೆಂಬ ಚಿಂತೆಯು ಎಲ್ಲಾ ವಿದ್ಯಾರ್ಥಿಗಳನ್ನು ಕಾಡುವ ಸಮಸ್ಯೆಯಾಗಿದೆ.

ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣ ಪಡೆಯಬೇಕೆಂಬ ಆಸೆಯು ಕೈಗೆ ಎಟುಕದೇ ಇದ್ದ ಸಂದರ್ಭದಲ್ಲಿ ಪರ್ಯಾಯ ಪದವಿ ಕೊರ್ಸುಗಳನ್ನು ಮಾಡಿ ಸಾಧನೆ ಮಾಡುವುದು ಜಾಣ, ಬುದ್ಧಿವಂತ ವಿದ್ಯಾರ್ಥಿಗಳ ಲಕ್ಷಣವಾಗಿರುವುದರಿಂದ ವಿದ್ಯಾರ್ಥಿಗಳು ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎಂ, ಜರ್ನಲಿಸಂ ಸೇರಿದಂತೆ ತಾವು ಆಸಕ್ತಿ ಹೊಂದಿರುವ ಯಾವುದೇ ಪದವಿ ಶಿಕ್ಷಣ ಪಡೆದು-ಕೊಂಡು, ತಮ್ಮಲ್ಲಿನ ಕೀಳರಿಮೆಯನ್ನು ಅಳಿಸಿಹಾಕಿ ಆತ್ಮ ವಿಶ್ವಾಸದಿಂದ ಮುನ್ನಡೆದು ಸಾಧಕರಾಗಿ ಹೊರ ಹೊಮ್ಮಬೇಕು. ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಹೆದರಿ ಪಲಾಯನ ವಾದವನ್ನು ಅನುಸರಿಸದೇ ಧೈರ್ಯದಿಂದ ಮುನ್ನಡೆದು ಸಾಧನೆ ಮಾಡಬೇಕು ಎಂದು ಡಾ. ಜಗಧೀಶ್ ಮನವಿ ಮಾಡಿದರು.

ಫೆಬ್ರವರಿ 6ರಂದು ಕೆ.ಆರ್. ಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾಲೇಜು ಹಬ್ಬದ ಅಂಗವಾಗಿ ರಾಜ್ಯ ಮಟ್ಟದ ಜಾನಪದ ಗೀತ ಗಾಯನ ಸ್ಪರ್ಧೆಯನ್ನು ಹಮ್ಮಿಕೊಂಡಿದ್ದು ಆಸಕ್ತ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಪ್ರಾಂಶುಪಾಲ ಡಾ.ಜಗಧೀಶ್ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಿಜಿಎಸ್ ಪಿಯು ಕಾಲೇಜಿನ ಪ್ರಾಂಶುಪಾಲರಾದ ರಾಘವೇಂದ್ರ, ಪ್ರಸಾದೇಗೌಡ, ಕನ್ನಡ ಪ್ರಾಧ್ಯಾಪಕ ಡಾ. ಜಯಕೀರ್ತಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಧೀಕ್ಷಕ ಬಿ. ಎ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

**ವರದಿ :ಎಸ್ ರವಿ ಹೊನ್ನೇನಹಳ್ಳಿ**

## ಮಕ್ಕಳ ಪ್ರತಿಭೆಯನ್ನು ಗುರುತಿಸುವುದು ಶಿಕ್ಷಕರ ಕೆಲಸ: ಡಾ.ಮಹೇಶ ಹಂಚಾಟೆ



**ಇಳಕಲ್ :** ಮಕ್ಕಳಲ್ಲಿ ಅಡಗಿರುವ ಸೂಕ್ತವಾದ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಶಿಕ್ಷಣದಲ್ಲಿ ಅಡಗಿರುವ ಪ್ರತಿಭೆಯನ್ನು ಗುರುತಿಸುವ ಕೆಲಸ ಶಿಕ್ಷಕರದು ಎಂದು ಆಯುರ್ವೇದ ವೈದ್ಯ, ಸಮಾಜ ಸೇವಕ ಮಹೇಶ ಎಸ್. ಹಂಚಾಟೆ ಅವರು ಹೇಳಿದರು.

ನಗರದ ಹೆಮ್ಮೆಯ ಶಿಕ್ಷಣ ಸಂಸ್ಥೆ ಬಸವೇಶ್ವರ ಶಿಕ್ಷಣ ಸಮಿತಿಯು ನಡೆಸುತ್ತಿರುವ ಬಸವೇಶ್ವರ ಕನ್ನಡ ಮಾಧ್ಯಮ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 2024-25 ನೇ ಸಾಲಿನ ಪ್ರತಿಭಾ ಪುರಸ್ಕಾರ ಹಾಗೂ 30ನೇ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಪಠ್ಯೆಯೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳನ್ನು ತೊಡೆಸುತ್ತಿರು ಬಸವೇಶ್ವರ ಶಾಲೆಯ ಶಿಕ್ಷಕರು ಸೇವೆ ಅನನ್ಯ ಎಂದರು.

ಅತಿಥಿಗಳಾಗಿ ರಾಜೇಶ್ವರಿ ಹಂಚಾಟೆ, ಮಹಾಂತೇಶ ಗೊರಜನಾಳ, ಜಿ.ಎಸ್.ಗೌಡರ, ಬಿ.ಎಸ್.ಪಾಟೀಲ, ಬಿ.ಎಸ್.ಸಜ್ಜನ, ಎಸ್.ಹೆಚ್. ಮಾಲಿಪಾಟೀಲ, ಗಿರಿರಾಜಗೌಡ ಪಾಟೀಲ, ಶಾಲೆಯ ಮುಖ್ಯೋಪಾಧ್ಯಾಯ ಸಿದ್ದು ಕೊಪ್ಪದ ಮೊದಲಾದವರು ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಅಗ್ನಿ ತಮ್ಮ ಸಮಾರೋಪ ಮಾತುಗಳಲ್ಲಿ ಬಸವೇಶ್ವರ ಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ತಾಲೂಕ, ಜಿಲ್ಲಾ ಮಟ್ಟದಲ್ಲಿ ಆಯ್ಕೆಗೊಂಡು ಪ್ರಶಸ್ತಿಗೆ ಭಾಜನರಾಗಿರುವದು ಸಂತೋಷಕರ ಸಂಗತಿಯಾಗಿದೆ ಎಂದರು. ವೀರೇಶ ರ್‍ಯಾವಣಕಿ ಪ್ರಾರ್ಥಿಸಿದರು, ರೇಣುಕಾ ಕೆಲೂರ ಸ್ವಾಗತಿಸಿದರು, ಅನುರಾಧ ಸನ್ನಿ ಪರಿಚಯಿಸಿದರು, ರಂಜಾನಬಿ ನದಾಫ್ ನಿರುಪಿಸಿದರು, ವಿದ್ಯಾರ್ಥಿ ಪ್ರತಿನಿಧಿ ಸವಿತಾ ಹೂಗಾರ ವೇದಿಕೆಯಲ್ಲಿದ್ದರು ಜ್ಯೋತಿ ಚಲವಾದಿ ವಂದಿಸಿದರು.

## ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ವಿ ಉದ್ಯಮಿಯಾಗಿ ಹೊರಹೊಮ್ಮಿ: ಸಚಿವ ತಿಮ್ಮಾಪೂರ

**ಬಾಗಲಕೋಟೆ :** ಸ್ಪರ್ಧಾತ್ಮಕ ಯುಗದಲ್ಲಿ ಯಶಸ್ವಿ ಉದ್ಯಮಿಯಾಗಿ ಹೊರಹೊಮ್ಮಲು ಕನಸು ಕಾಣಬೇಕು ಹಾಗೂ ಧೈರ್ಯದಿಂದ ಪಯಣ ಮಾಡಲು ಮುಂದಾಗಬೇಕು ಎಂದು ಸಚಿವ ಆರ್. ಬಿ. ತಿಮ್ಮಾಪೂರ ಹೇಳಿದರು.



ಬಾಗಲಕೋಟೆಯ ನವನಗರದ ಕೈಗಾರಿಕಾ ಪ್ರದೇಶದಲ್ಲಿ ಎಂ.ಕೆ. ಅಕ್ವಾ ಮಿನರಲ್ ನೀರಿನ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, "ಯಾವತ್ತೂ ನೆಗೆಟಿವ್ ವಿಚಾರಗಳ ಬಗ್ಗೆ ಗಮನಹ-ರಿಸಬಾರದು. ಧನಾತ್ಮಕ ಆಲೋಚನೆಗಳನ್ನು ಮುಂದುವ-ರಿಸಬೇಕು. ಇಂದಿನ ಉದ್ಯಮಿಗಳು ಕೇವಲ ಹಣ ಗಳಿಸುವುದರ ಕಡೆಗೆ ಮಾತ್ರ ಗಮನಹರಿಸದೆ, ಗುಣಮಟ್ಟದ ಉತ್ಪನ್ನಗಳನ್ನು ನೀಡಲು ಪ್ರಯತ್ನಿಸಬೇಕು. ಕ್ವಾಲಿಟಿ ಎನ್ನುವುದು ಯಶಸ್ಸಿನ ತಳಹದಿಯ ಮೌಲ್ಯವಾಗಿದೆ ಎಂದು ಹೇಳಿದರು. ಈ ಘಟಕವು ನೂತನ ತಂತ್ರಜ್ಞಾನವನ್ನು ಬಳಸಿಕೊಂಡು ಗುಣಮಟ್ಟದ ನೀರಿನ ಸೇವೆಯನ್ನು ಜನರಿಗೆ ಒದಗಿಸಬೇಕು.

ಸಂಸ್ಥಾಪಕರಾದ ಮುಖ್ತಾರ ಮೋಮಿನ ಅವರು ಈ ಯೋಜನೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಜವಾಬ್ದಾರಿ ವಹಿಸಬೇಕು.

ನೀರಿನ ಗುಣಮಟ್ಟ ನಿರ್ವಹಣೆಯೊಂದಿಗೆ ಸ್ಥಳೀಯ ಉದ್ಯೋಗ ಆಕಾಶಗಳನ್ನು ಸೃಷ್ಟಿಯಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು. ಎಂ.ಕೆ. ಅಕ್ವಾ ಮಿನರಲ್ ನೀರಿನ ಘಟಕವು ಮುಂದೆ ರಾಜ್ಯದ ಉನ್ನತ ಮಟ್ಟದ ಬೇಡಿಕೆಗೆ ತಕ್ಕ ರೀತಿಯಲ್ಲಿ ಕಾರ್ಯ ನಿರ್ವಹಿಸಲಿ ಎಂದು ಹಾರೈಸಿದರು. ಈ ಸಂದರ್ಭದಲ್ಲಿ ಅಬ್ದುಲ್ ರೆಹಮಾನ್ ಮನಿಯಾರ, ಶಾಸಕ ಎಚ್. ವೈ. ಮೇಟಿ, ಸಂಸದ ಪಿ.ಸಿ.ಗದ್ದಿಗೌಡರ, ಅಂಜುಮನ್ ಸಂಸ್ಥೆಯ ಅಧ್ಯಕ್ಷರಾದ ಇಮಾಮ್ ಜಾಫರ್ ಬೇಪಾರಿ, ಕಾರಿ ಸಮಿಉಲ್ಲಾ, ರಫೀಕ ಉಮ್ರಿ, ಯುವ ಮುಖಂಡರಾದ ಸಂತೋಷ ಹೊಕ್ರಾಣಿ, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವ್ಯವಸ್ಥಾಪಕ ಆದರ್ಶ ಸಿಂಗ್, ರಾಜು ಲಮಾಣಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

## ವಿದ್ಯಾರ್ಥಿಗಳು ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕು: ಶಾಸಕ ಸವದಿ

**ರಬಕವಿ-ಬನಹಟ್ಟಿ:** ವಿದ್ಯಾರ್ಥಿಗಳು ದೇಶಾಭಿಮಾನವನ್ನು ಬೆಳೆಸಿಕೊಳ್ಳಬೇಕು. ರಾಷ್ಟ್ರೀಯ ಹಬ್ಬಗಳಲ್ಲಿ ಸಂಭ್ರಮ ಸಡಗರದಿಂದ ಭಾಗವಹಿಸಬೇಕು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು. ಅವರು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಸಂವಿಧಾನದ ಓದು ಅಗತ್ಯ. ಅದರಲ್ಲೂ ನಾವು ನಮ್ಮ ಹಕ್ಕುಗಳಿಗೆ ನೀಡುವ ಪ್ರಾಮುಖ್ಯತೆಯನ್ನು ಕರ್ತವ್ಯಗಳಿಗೂ ನೀಡಬೇಕು. ಆಧುನಿಕ ತಂತ್ರಜ್ಞಾನ ಯುಗದಲ್ಲಿ ನಾವು ಅಧ್ಯಯನಶೀಲರಾಗಬೇಕು. ಸಂವಿಧಾನದ ಆಶಯಗಳನ್ನು ಅರಿತುಕೊಂಡು ಸಂವಿಧಾನದ ಮಹತ್ವವನ್ನು ಬೇರೆಯವರಿಗೆ ತಿಳಿಸಬೇಕು. ಮುಂದಿನ ದಿನಗಳಲ್ಲಿ ಕಾಲೇಜಿಗೆ ಬೇಕಾಗಿರುವ ಇನ್ನಷ್ಟು ಮೂಲಭೂತ ಸೌಲಭ್ಯಗಳನ್ನು ಸರ್ಕಾರದಿಂದ ನೀಡುವುದಾಗಿ ಶಾಸಕ ಸವದಿ ತಿಳಿಸಿದರು.

ಪ್ರಾಚಾರ್ಯ ಶಿವು ಹಂದಿಗುಂದ ಮಾತನಾಡಿ, ವಿದ್ಯಾರ್ಥಿಗಳು ನಮ್ಮ ದೇಶದ ಸಂವಿಧಾನವನ್ನು ಗೌರವಿಸಬೇಕು. ವಿವಿಧತೆಯಲ್ಲಿ ಏಕತೆಯನ್ನು ಸಾರಿರುವ ಭಾರತದ ಅಭಿವೃದ್ಧಿಯು ಯುವ ಶಕ್ತಿಯಲ್ಲಿದೆ ಎಂದರು.

ಈ ಸಂದರ್ಭದಲ್ಲಿ ಮಹಾದೇವ ಪೋತರಾಜ, ಪ್ರಕಾಶ ಅಂಬಲಿ, ಮಾರುತಿ ನಡಕಟ್ಟಿನ ಮಾತನಾಡಿದರು. ಅಕ್ಷತಾ ಶಿರೋಳ ದೇಶಭಕ್ತಿ ಗೀತೆ ಹಾಡಿದರು. ನಗರದ ಮುಖಂಡ ಧರೆಪ್ಪ ಉಳ್ಳಾಗಡ್ಡಿ, ಚೇತನ ಡಾಗಾ, ಶಾನೂರಕುಮಾರ ಗಾಣಿಗೇರ, ರಮೇಶ ಮಾಗುರಿ, ದೀಪಾ ಜಹಗೀರದಾರ, ಮಹಾದೇವ ಪೋತರಾಜ, ರಮೇಶ ಕುಂಬಾರ, ಬಿ. ಎ. ದೇಸಾಯಿ, ವಿನೋದ ಘಟ್ಟೆ, ಚೇತನ ಚೋಪಡೆ, ವಿಜಯ ಕಾಬ್ರಾ, ಮೀನಾಕ್ಷಿ ಜಂಬಗಿ, ರಾಜಶೇಖರ ಬೀಳಗಿ ಉಪಸ್ಥಿತರಿದ್ದರು.

# ಅಪಘಾತ: ಚಾಚೋಣ ಸಹಾಯಹಸ್ತ


## ಗಾಯಾಳುಗಳಿಗೆ ನೆರವಾಗುವ ದಿಸೆಯಲ್ಲಿ ಸಾರ್ವಜನಿಕರಲ್ಲಿ ಮೂಡಿಸಬೇಕಿದೆ ಜಾಗೃತಿ

ಭಾರತದಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ಪ್ರತಿವರ್ಷ ಸುಮಾರು ಒಂದೂವರೆ ಲಕ್ಷ ಜನ ಮೃತಪಡುತ್ತಾರೆ ಮತ್ತು ಐದು ಲಕ್ಷ ಜನ ಗಾಯಗೊಳ್ಳುತ್ತಾರೆ. ಜಾಗತಿಕ ಮಟ್ಟದಲ್ಲಿ ರಸ್ತೆ ಅಪಘಾತದಲ್ಲಾಗುವ ಸಾವುಗಳಲ್ಲಿ ಶೇಕಡ 12ರಷ್ಟು ಭಾರತದಲ್ಲಿಯೇ ಸಂಭವಿಸುತ್ತವೆ.

ನಿರ್ಲಕ್ಷ್ಯದಿಂದ ಕೂಡಿದ ವಾಹನ ಚಲಾವಣೆ, ವಾಹನಗಳಲ್ಲಿನ ತಾಂತ್ರಿಕ ದೋಷ ಮತ್ತು ಕೆಟ್ಟ ಸ್ಥಿತಿಯಲ್ಲಿರುವ ಹೆದ್ದಾರಿಗಳು? ಇವು ರಸ್ತೆ ಅಪಘಾತ ಸಂಭವಿಸಲು ಇರುವ ಪ್ರಮುಖ ಕಾರಣಗಳು. ಅಪಘಾತ ಸಂಭವಿಸಿದ ತಕ್ಷಣವೇ ಸೂಕ್ತ ಚಿಕಿತ್ಸೆ ದೊರಕದೇ ಗಾಯಾಳುಗಳು ಮೃತಪಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಘಟನಾ ಸ್ಥಳದಲ್ಲಿ ಇರುವ ಸಾರ್ವಜನಿಕರು ಗಾಯಾಳುಗಳ ಸಹಾಯಕ್ಕೆ ಮುಂದಾಗದೆ ಇರುವುದೇ ಸಾವಿನ ಸಂಖ್ಯೆ ಏರಿಕೆಯಾಗಲು ಇರುವ ಮುಖ್ಯ ಕಾರಣ.

'ನಮಗೆ ಯಾಕೆ ಬೇಕು, ಸುಮ್ಮನೆ ಹಿಂಸೆ', 'ಕೋರ್ಟ್ ಓಡಾಟ ನಮಗೆ ಬೇಡ' ಎನ್ನುವ ಭಯದ ಕಾರಣದಿಂದ ಜನರು ಗಾಯಾಳುಗಳಿಗೆ ಸಹಾಯವನ್ನೇ ಮಾಡುವುದಿಲ್ಲ. ಗಾಯಾಳುಗಳಿಗೆ 'ಗೋಲ್ಡನ್ ಅವರ್'ನಲ್ಲಿ (ಅಪಘಾತ ಸಂಭವಿಸಿದ ಮೊದಲ ಒಂದು ತಾಸು) ಅಗತ್ಯವಾಗಿ ಆಗಬೇಕಾದ ಪ್ರಥಮ ಚಿಕಿತ್ಸೆ, ಸಹಕಾರ ಸಿಗುವುದೇ ಇಲ್ಲ. ಇದರಿಂದ ಗಾಯಾಳುಗಳು ಒಂದೋ ಮೃತಪಡುತ್ತಾರೆ ಇಲ್ಲವೇ ಶಾಶ್ವತವಾಗಿ ಅಂಗವಿಕಲರಾಗುತ್ತಾರೆ.

ಗಾಯಾಳುಗಳಿಗೆ ಸಾರ್ವಜನಿಕರು ಯಾಕಾಗಿ ಸಹಾಯ ಮಾಡುವುದಿಲ್ಲ ಎನ್ನುವ ಕುರಿತು 'ಸೇವ್‌ಲೈಫ್ ಫೌಂಡೇಷನ್ ಮತ್ತು 'ಟಿಎನ್‌ಎಸ್ ಇಂಡಿ-ಯಾ ಪ್ರೈವೇಟ್ ಲಿ.' ಸಂಸ್ಥೆಗಳು ರಾಷ್ಟ್ರ ಮಟ್ಟದಲ್ಲಿ ಅಧ್ಯಯನವೊಂದನ್ನು ನಡೆಸಿವೆ. 'ಭಾರತದಲ್ಲಿ ಅಪಘಾತ ಸಂಭವಿಸಿದಾಗ ಸಮೀಪ ಇರುವ ಜನ ಆರೈಕೆ ನೀಡುವುದಕ್ಕೆ ಇರುವ ಅಡೆತಡೆಗಳು' ಎಂಬ ಹೆಸರಿನಲ್ಲಿ ವರದಿಯೊಂದನ್ನು ಬಿಡುಗಡೆ ಮಾಡಿವೆ.



ಈ ವರದಿಯ ಪ್ರಕಾರ, ಶೇ 74ರಷ್ಟು ಜನ ಗಾಯಾಳುಗಳಿಗೆ ಸಹಾಯ ಮಾಡುವುದಕ್ಕೆ ಇಚ್ಛಿಸುವುದಿಲ್ಲ. ಕೋರ್ಟು?ಕೇಸು ಎಂದು ಅಲೆಯಬೇಕು, ಪೊಲೀಸರು ಪದೇ ಪದೇ ತನಿಖೆಗೆ ಕರೆಯುತ್ತಾರೆ, ನ್ಯಾಯಾಲಯಕ್ಕೆ ಪದೇ ಪದೇ ಹಾಜರಾಗಬೇಕು ಎನ್ನುವ ಕಾರಣಕ್ಕೆ ಶೇ 88ರಷ್ಟು ಜನ ಗಾಯಾಳುಗಳಿಗೆ ಸಹಾಯ ಮಾಡುವುದಿಲ್ಲ. ಆಸ್ಪತ್ರೆಗೆ ದಾಖಲಿಸಿದ ನಂತರ ಬಹಳ ಹೊತ್ತು ಅಲ್ಲೇ ಇರಬೇಕಾಗುತ್ತದೆ, ಆಸ್ಪತ್ರೆ ದಾಖಲಾತಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ ಎಂಬ ಕಾರಣಕ್ಕೆ ಶೇ 77ರಷ್ಟು ಮಂದಿ ಗಾಯಾಳುಗಳಿಗೆ ಸಹಾಯ ಮಾಡುವುದಿಲ್ಲ.

ಸಾಮಾಜಿಕ ಜಾಲತಾಣಗಳಲ್ಲಿ ರಸ್ತೆ ಅಪಘಾತದ ಹಲವು ವಿಡಿಯೊಗಳು ಹರಿದಾಡುತ್ತವೆ. ಅಪಘಾತದಲ್ಲಿ ಗಾಯಗೊಂಡವರು ಸಹಾಯಕ್ಕಾಗಿ ಬೇಡುತ್ತಿರುವ ದೃಶ್ಯಗಳೂ ವಿಡಿಯೊಗಳಲ್ಲಿ ಇರುತ್ತವೆ. ಆದರೆ, ಹೆಚ್ಚಿನ ಸಂದರ್ಭಗಳಲ್ಲಿ ಯಾರೂ ಸಹಾಯ ಮಾಡುವುದಿಲ್ಲ. ಕೆಲವರು ವಿಡಿಯೊ ಮಾಡಿಕೊಂಡು ನಿಂತಿರುತ್ತಾರೆ. ಪೊಲೀಸರಿಗೆ ಅಥವಾ ಆಂಬುಲೆನ್ಸ್‌ಗಾದರೂ ಕರೆ ಮಾಡಬೇಕು ಎಂದು ಯಾವ ದಾರಿಹೋಕರಿಗೂ ಅನ್ನಿಸುವುದಿಲ್ಲ. ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲು ಯಾರೂ ಮುಂದಾಗುವುದಿಲ್ಲ.

ಸಮಾಜದಲ್ಲಿ 'ಗುಡ್ ಸಮರಿಟನ್' (ಪರೋಪಕಾರಿ) ಸಂಸ್ಕೃತಿಯನ್ನು ಬೆಳೆಸುವುದೇ ಇದಕ್ಕಿರುವ ಪರಿಹಾರ. ಬೈಬಲ್‌ನಲ್ಲಿ ಹೇಳಿರುವ ನೀತಿಕತೆಗಳಲ್ಲಿ 'ಗುಡ್ ಸಮರಿಟನ್' ಎನ್ನುವ ಪರಿಕಲ್ಪನೆಯು ತನ್ನ ಮೂಲವನ್ನು ಹೊಂದಿದೆ.

ಕತೆ ಹೀಗಿದೆ: 'ವ್ಯಕ್ತಿಯೊಬ್ಬರು ಜೆರುಸಲೇಂನಿಂದ ಜೆರಿಕೊ ನಗರಕ್ಕೆ ಹೊರಟಿದ್ದರು. ಮಾರ್ಗಮಧ್ಯೆ ದರೋಡೆ-ಕೋರರು ವ್ಯಕ್ತಿಯನ್ನು ತೀವ್ರವಾಗಿ ಥಳಿಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ವ್ಯಕ್ತಿಯ ಪಕ್ಕದಲ್ಲಿಯೇ ಇಬ್ಬರು ನಡೆದುಹೋದರು. ಆದರೆ, ಅವರು ಸಹಾಯ ಮಾಡಲಿಲ್ಲ. ಒಬ್ಬ ಸಮರಿಟನ್ (ಸಮರಿಯಾ ನಗರದವನು) ಗಾಯಗೊಂಡ ವ್ಯಕ್ತಿಗೆ ಸಹಾಯ ಮಾಡಿದನು. ಗಾಯಗಳಿಗೆ ಔಷಧ ಹಚ್ಚಿ ಉಪಚರಿಸಿದನು. ಆಶ್ರಯವನ್ನೂ ನೀಡಿದನು.

ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರನ್ನು ತಕ್ಷಣವೇ ಉಪಚರಿಸುವ ಸಂಸ್ಕೃತಿಯನ್ನು ಜನರಲ್ಲಿ ಬೆಳೆಸಬೇಕಿದೆ. ಇದಕ್ಕಾಗಿ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. 'ಗುಡ್ ಸಮರಿಟನ್' ಆಗುವಂತೆ ಜನರನ್ನು ಪ್ರೋತ್ಸಾಹಿಸಬೇಕಿದೆ. ಜಾಗೃತಿ ಮೂಡಿಸಿದರೆ ಸಾಲದು, ಗಾಯಾಳುಗಳಿಗೆ ಸಹಾಯ ನೀಡಲು ಉತ್ತೇಜಿಸುವಂಥ ವಾತಾವರಣವನ್ನೂ ನಿರ್ಮಿಸಬೇಕು. 'ಗುಡ್ ಸಮರಿಟನ್' ಆಗಿ ಗಾಯಾಳುಗಳಿಗೆ ಸಹಾಯ ಮಾಡುವ ವ್ಯಕ್ತಿಯನ್ನು ಕಾನೂನು ಕ್ರಮಗಳಿಂದ ರಕ್ಷಿಸುವಂಥ ಮಾರ್ಗಸೂಚಿಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಮಾರ್ಗಸೂಚಿಯಲ್ಲಿ ಹೇಳಿರುವ ಅಂಶಗಳು ಇಂತಿವೆ:

ರಸ್ತೆ ಅಪಘಾತ ನಡೆದಾಗ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದ ವ್ಯಕ್ತಿಯನ್ನು ಹೆಚ್ಚು ಹೊತ್ತು ಆಸ್ಪತ್ರೆಯಲ್ಲಿ ಇರುವಂತೆ ಮಾಡಬಾರದು. ವ್ಯಕ್ತಿಯಿಂದ ಆತನ ವಿಳಾಸ ಪಡೆದುಕೊಂಡು ತಕ್ಷಣವೇ ಕಳುಹಿಸಿಕೊಡಬೇಕು ಮತ್ತು ಪೊಲೀಸರು ಅಲ್ಲಿ ಆತನ ತನಿಖೆ ನಡೆಸುವಂತಿಲ್ಲ. ಗಾಯಾಳುಗಳನ್ನು ಉಪಚರಿಸಿದ ವ್ಯಕ್ತಿಗೆ ಸೂಕ್ತ ಬಹುಮಾನ ನೀಡಬೇಕು. ಈ ವ್ಯಕ್ತಿಯನ್ನು ಯಾವ ಸಿವಿಲ್ ಅಥವಾ ಕ್ರಿಮಿನಲ್ ಅಪರಾಧ ಪ್ರಕರಣಗಳಲ್ಲೂ ಹೆಸರಿಸಬಾರದು.

ಅಪಘಾತ ನಡೆದ ಕುರಿತು ಪೊಲೀಸರಿಗೆ ಯಾರಾದರೂ ಕರೆ ಮಾಡಿ ಮಾಹಿತಿ ನೀಡುತ್ತಾರೆ ಎಂದಾದರೆ, ಅಂಥವರು ತಮ್ಮ ಹೆಸರು ಸೇರಿದಂತೆ ಖಾಸಗಿ ಮಾಹಿತಿಯನ್ನು ಪೊಲೀಸರಿಗೆ ನೀಡಬೇಕಾಗಿಲ್ಲ. ಮಾಹಿತಿ ನೀಡುವುದು ಸಂಪೂರ್ಣ ಐಚ್ಛಿಕವಾಗಿರಲಿದೆ. ಜೊತೆಗೆ, ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸುವಾಗ ತುಂಬಬೇಕಾದ ಅರ್ಜಿಯಲ್ಲಿಯೂ (ಮೆಡಿಕೊ ಲೀಗಲ್ ಕೇಸ್) ವ್ಯಕ್ತಿಯು ತನ್ನ ವೈಯಕ್ತಿಕ ಮಾಹಿತಿಯನ್ನು ನಮೂದಿಸಬೇಕಾಗಿಲ್ಲ.

ಒಂದು ವೇಳೆ, ಗಾಯಾಳುಗಳಿಗೆ ಸಹಾಯ ಮಾಡಿದ ವ್ಯಕ್ತಿಯು 'ಅಪಘಾತ ನಡೆದ ವೇಳೆ ಸ್ಥಳದಲ್ಲಿ ನಾನೂ ಇದ್ದೆ, ಅಪಘಾತಕ್ಕೆ ನಾನೇ ಸಾಕ್ಷಿ' ಎಂದು ಹೇಳಿಕೊಂಡರೆ ಆತನನ್ನು ಪೊಲೀಸರು ಒಂದೇ ಬಾರಿ ತನಿಖೆಗೆ ಒಳಪಡಿಸಬೇಕೇ ವಿನಾ ಪದೇ ಪದೇ ತನಿಖೆಗೆ ಕರೆಯುವಂತಿಲ್ಲ. 'ಗುಡ್ ಸಮರಿಟನ್' ಅನ್ನು ಹೇಗೆ ನಡೆಸಿಕೊಳ್ಳಬೇಕು ಎಂಬ ಬಗ್ಗೆ ರಾಜ್ಯ ಸರ್ಕಾರಗಳು ನಿಯಮ ರೂಪಿಸಿಕೊಳ್ಳಬೇಕು.

'ಗುಡ್ ಸಮರಿಟನ್' ಪ್ರವೃತ್ತಿಯನ್ನು ಪ್ರೋತ್ಸಾಹಿಸುವ ಮತ್ತು ರಸ್ತೆ ಅಪಘಾತದ ಗಾಯಾಳುಗಳಿಗೆ ತಕ್ಷಣವೇ ಚಿಕಿತ್ಸೆ ಒದಗಿಸುವ ನಿಮಿತ್ತ ಕರ್ನಾಟಕ ಸರ್ಕಾರವು 'ಮುಖ್ಯಮಂತ್ರಿ ಸಾಂತ್ವನ?ಹರೀಶ್ ಯೋಜನೆ'ಯನ್ನು ಜಾರಿ ಮಾಡಿದೆ. 'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್' ಎಂಬ ಸ್ವಾಯತ್ತ ಸಂಸ್ಥೆ ಈ ಯೋಜನೆಯನ್ನು ನಿರ್ವಹಿಸುತ್ತದೆ. ಈ ಸಂಸ್ಥೆಯು ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುತ್ತದೆ.

ನೆಲಮಂಗಲದ ಸಮೀಪ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ ಹರೀಶ್ ಎಂಬುವರ ನೆನಪಿನಲ್ಲಿ ಈ ಯೋಜನೆಗೆ ಹೆಸರಿಡಲಾಗಿದೆ. ಅಪಘಾತದಲ್ಲಿ ಗಾಯಗೊಂಡವರಿಗೆ ಅಪಘಾತ ಸಂಭವಿಸಿದ 48 ಗಂಟೆಗಳ ಒಳಗಾಗಿ ಈ ಯೋಜನೆ ಅಡಿಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ ಮತ್ತು ?25 ಸಾವಿರದವರೆಗಿನ ಚಿಕಿತ್ಸಾ ವೆಚ್ಚವನ್ನು ಸರ್ಕಾರವೇ ಭರಿಸಲಿದೆ.

ರಸ್ತೆ ಅಪಘಾತದಲ್ಲಿ ಗಾಯಗೊಳ್ಳುವವರಿಗೆ ಸಹಾಯ ಮಾಡುವುದಕ್ಕೆ ಸಾರ್ವಜನಿಕರು ಮುಂದೆ ಬರುವಂತೆ ಮಾಡಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ಕ್ರಮಗಳನ್ನು ಕೈಗೊಂಡಿವೆ. ಆದರೂ ಈ ಕ್ರಮಗಳು ಸಾಲುತ್ತಿಲ್ಲ. ನಾವು ಇನ್ನಷ್ಟು ಮುಂದೆ ಸಾಗಬೇಕಾಗಿದೆ. ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ನಾಗರಿಕ ವೇದಿಕೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಸರ್ಕಾರಿ ಸಂಸ್ಥೆಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ವಿಷಯದಲ್ಲಿ ಕೈಜೋಡಿಸಬೇಕಿದೆ. ಪ್ರತಿಯೊಬ್ಬರೂ 'ಗುಡ್ ಸಮರಿಟನ್' ಆಗುವಂಥ ವಾತಾವರಣವನ್ನು ಸೃಷ್ಟಿಸಬೇಕಿದೆ. ಅತ್ಯಮೂಲ್ಯ ಜೀವಗಳನ್ನು ರಕ್ಷಿಸಲು ಇದು ಜರೂರಾಗಿ ಆಗಬೇಕಿರುವ ಕೆಲಸವಾಗಿದೆ.

**ಕೃಪೆ : ಪ್ರ.ವಾ ಲೇಖಕ : ಡಾ.ಎಂ.ಎ.ಸಲೀಂ**
**ಪೊಲೀಸ್ ಮಹಾನಿರ್ದೇಶಕ,**
**ಸಿ.ಐ.ಡಿ. ಮತ್ತು ಆರ್ಥಿಕ ಅಪರಾಧಗಳು,**
**ಬೆಂಗಳೂರು**

# ಯುವಕರು ಭವ್ಯ ಭಾರತದ ಪ್ರಜೆಗಳು: ನ್ಯಾ. ಕುಮಾರ ಡಿ.ಕೆ



**ಕೊಪ್ಪಳ** : ಯುವ ಮತದಾರರು ಭವ್ಯ ಭಾರತದ ಪ್ರಜೆಗಳಾಗಿದ್ದು ಚುನಾವಣೆಗಳ ಸಂದರ್ಭದಲ್ಲಿ ತಾವೆಲ್ಲರೂ ತಪ್ಪದೇ ಮತ ಚಲಾಯಿಸಬೇಕೆಂದು ಗೌರವಾನ್ವಿತ ಹೆಚ್ಚುವರಿಜಿಲ್ಲಾಮತ್ತುಸತ್ರನ್ಯಾಯಾಧೀಶರು ಹಾಗೂ ಪೋಕ್ಸೋ ನ್ಯಾಯಾಲಯದ ನ್ಯಾಯಾಧೀಶರಾದ ಕುಮಾರ್ ಡಿ.ಕೆ ಹೇಳಿದರು.

ಅವರು ಭಾರತ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ. ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ ಕೊಪ್ಪಳ. ಹಾಗೂ ಜಿಲ್ಲಾ ಸ್ವೀಫ್ ಸಮಿತಿ ಕೊಪ್ಪಳ ಇವರ ಸಹಯೋಗದಲ್ಲಿ ಕೊಪ್ಪಳ ನಗರದ ಸಾಹಿತ್ಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆ–2025 ಕಾರ್ಯಕ್ರಮಉದ್ಘಾಟಿಸಿಮಾತನಾಡಿದರು. ಪ್ರಜಾಪ್ರಭುತ್ವದಲ್ಲಿ ಪ್ರತಿ ಪ್ರಜೆ–ಪ್ರತಿನಿಧಿ, ತಮ್ಮ ನಾಯಕನನ್ನು ಆಯ್ಕೆ ಮಾಡುವ ಶಕ್ತಿ ತಮ್ಮ ಮತಕ್ಕಿದೆ. ಮತದಾರರಲ್ಲಿ ಜಾಗೃತಿ ಮೂಡಿಸುವ ಮೂಲಕ ಎಲ್ಲರೂ ಮತದಾನ ಮಾಡಬೇಕು ಎಂಬುದು ಭಾರತ ಚುನಾವಣಾ ಆಯೋಗದ ಧ್ಯೇಯೋದ್ದೇಶವಾಗಿದೆ. ಇಂದಿನ ವೈಜ್ಞಾನಿಕ ವಿಧ್ಯಮಾನಗಳಿಂದ ನಿಮ್ಮ ಕೈಯಲ್ಲಿ ಎಲ್ಲಾ ಮಾಹಿತಿ ಇದೆ. ಮೊಬೈಲ್ ಮೂಲಕ ಮಾಹಿತಿಯನ್ನು ಕುಳಿತಲ್ಲೆ ಪಡೆಯಬಹುದಾಗಿದೆ. ತಮಗೆಲ್ಲರಿಗೂ ರಾಷ್ಟ್ರೀಯ ಮತದಾರರ ದಿನಾಚರಣೆ ಶುಭಾಶಯಗಳು ಎಂದು ಹೇಳಿದರು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ನಲಿನ್ ಅತುಲ್ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ನಮ್ಮದಾಗಿದೆ. ಇದನ್ನು ಮುಂದುವರಿಸಿಕೊಂಡು ಹೋಗಬೇಕಾದರೆ ಈ ದೇಶದ ಪ್ರಜೆಗಳ ಪಾತ್ರ ಬಹಳ ಮುಖ್ಯ ಇದೆ. ನಮ್ಮ ದೇಶದ ಪ್ರಗತಿ ನಮ್ಮ ನಾಯಕರು ನಿರ್ಧರಿಸಿದರೆ, ಅವರಿಗೆ ನಮ್ಮ ಮತ ನಿರ್ಧರಿಸುತ್ತದೆ ಹಾಗಾಗಿ ಎಲ್ಲರೂ ತಪ್ಪದೇ ಮತದಾನ ಮಾಡಬೇಕು ಎಂದರು.

ಜನರಿಗೆ ತಮ್ಮ ಮತದಾನದ ಮಹತ್ವ ತಿಳಿಸಲು ಪ್ರತಿವರ್ಷ ಜನವರಿ 25 ರಂದು ರಾಷ್ಟ್ರೀಯ ಮತದಾರರ ದಿನಾಚರಣೆ ಆಚರಿಸಲಾಗುತ್ತದೆ. ಸ್ವೀಫ್ ಸಮಿತಿ ಮೂಲಕವು ಹಲವಾರು ಮತದಾನ ಜಾಗೃತಿ ಕಾರ್ಯಕ್ರಮಗಳನ್ನು ಚುನಾವಣೆ ಸಂದರ್ಭಗಳಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಇದರ ಉದ್ದೇಶ ಉತ್ತಮ ನಾಯಕನ ಆಯ್ಕೆ ಜನರು ಮಾಡಬೇಕು ಎಂಬುದಾಗಿದೆ. ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಎಲ್ಲರೂ ನೊಂದಣಿ ಮಾಡಿಕೊಳ್ಳಬೇಕು ಎಂದರು.

ನಮ್ಮ ಜಿಲ್ಲೆಯಲ್ಲಿ ಪುರುಷರಿಗಿಂತ ಮಹಿಳೆಯರೆ ಮತದಾರರ ಪಟ್ಟಿಯಲ್ಲಿ ಹೆಚ್ಚಿನ ನೊಂದಣಿ ಮಾಡಿಕೊಂಡಿದ್ದಾರೆ. 18 ವರ್ಷ ಮೇಲ್ಪಟ್ಟ ಯುವ ಮತದಾರರೆಲ್ಲರೂ ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ನೊಂದಣಿ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ 17 ಸಾವಿರ ಜನ ದಿವ್ಯಾಂಗರು ಇದ್ದಾರೆ. ಇನ್ನೂ ಹೆಚ್ಚಿನ ಜನ ಇರಬಹುದು. ಹಿಂದಿನ ವರ್ಷದ ಲೋಕಸಭಾ ಚುನಾವಣೆಯಲ್ಲಿ 100 ವರ್ಷ ಮೇಲ್ಪಟ್ಟ 227 ಜನ ಮತದಾನ ಮಾಡಿದ್ದಾರೆ. ಈ ವರ್ಷದ ಚುನಾವಣಾ ಆಯೋಗದ ಧ್ಯೇಯವಾಕ್ಯ ಮತದಾನಕ್ಕಿಂತ ಇನ್ನೊಂದಿಲ್ಲ ನಾನು ಖಚಿತವಾಗಿ ಮತದಾನ ಮಾಡುವೆ ಎಂಬುದಾಗಿದೆ ಎಂದು ಹೇಳಿದರು.

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಜಿಲ್ಲಾ ಸ್ವೀಫ್ ಸಮಿತಿ ಅಧ್ಯಕ್ಷರಾದ ರಾಹುಲ್ ರತ್ನಂ ಪಾಂಡೇಯ ಅವರು ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಯುವ ಮತದಾರರಿಗೆ ಸಾಂಕೇತಿಕವಾಗಿ ಮತದಾರರ ಗುರುತಿನ ಚೀಟಿಗಳನ್ನು ವಿತರಿಸಲಾಯಿತು. ಭೂತ ಮಟ್ಟದಲ್ಲಿ ಉತ್ತಮ ಕಾರ್ಯನಿರ್ವಹಿಸಿದ ಬಿ.ಎಲ್.ಓ ಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮತದಾರರ ದಿನಾಚರಣೆ ಅಂಗವಾಗಿ ವಿವಿಧ ಶಾಲಾ–ಕಾಲೇಜುಗಳಲ್ಲಿ ಹಮ್ಮಿಕೊಂಡಿದ್ದ ರಸಪ್ರಶ್ನೆ ಹಾಗೂ ಪ್ರಬಂಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಿ ಸನ್ಮಾನಿಸಲಾಯಿತು. ಅತ್ಯುತ್ತಮ ಎಲೆಕ್ಟ್ರೋ ಲಿಟರಸಿ ಕಾಲೇಜಿನ ಮುಖ್ಯಸ್ಥರಿಗೆ ಇದೇ ಸಂದರ್ಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್ ಅರಸಿದ್ದಿ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ್ ಎಸ್ ದರಗದ, ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾಧಿಕಾರಿ ಸಿದ್ರಾಮೇಶ್ವರ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಉಪ ವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿ.ಪಂ ಯೋಜನಾ ನಿರ್ದೇಶಕ ಪ್ರಕಾಶ ವಿ. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಗದೀಶ್, ಶಾಲಾ–ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ಶ್ರೀಶೈಲ ಬಿರಾದಾರ, ಕೊಪ್ಪಳ ತಹಶೀಲ್ದಾರ ವಿಠಲ ಚೌಗಲಾ, ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ದುಂಡಪ್ಪ ತುರಾದಿ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎ.ಬಸವರಾಜ, ರಾಜ್ಯಮಟ್ಟದ ಚುನಾವಣಾ ಸಂಪನ್ಮೂಲ ವ್ಯಕ್ತಿಗಳು ಹಾಗೂ ವಿವಿಧ ಶಾಲಾ–ಕಾಲೇಜುಗಳ ಮುಖ್ಯ ಗುರುಗಳು, ಶಿಕ್ಷಕರು ಮತ್ತು ಮಕ್ಕಳು ಸೇರಿದಂತೆ ಇತರೆ ಹಲವಾರು ಜನರು ಉಪಸ್ಥಿತರಿದ್ದರು.

ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಬೆಳಿಗ್ಗೆ ಕೊಪ್ಪಳ ತಾಲ್ಲೂಕು ಕ್ರೀಡಾಂಗಣದಲ್ಲಿ ವಿವಿಧ ಶಾಲಾ–ಕಾಲೇಜಿನ 3 ಸಾವಿರಕ್ಕಿಂತ ಹೆಚ್ಚಿನ ಮಕ್ಕಳು ಸೇರಿ ಬೃಹತ್ ಮಾನವ ಸರಪಳಿ ನಿರ್ಮಿಸಿ ಅದರಲ್ಲಿ ಭಾರತ ನಕ್ಷೆ, ವಾಯ್ಸ್ ಆಫ್ ಡೆಮಾಕ್ರಸಿ, ಸ್ವೀಫ್ ಕೊಪ್ಪಳ ನಿರ್ಮಿಸಿ ಗಮನ ಸೆಳೆದರು.

# ಐತಿಹಾಸಿಕ ಘಟನೆಗಳ ದಾಖಲು ಮಾಡಲು ಛಾಯಾಗ್ರಹಣದ ಪಾತ್ರ ಪ್ರಮುಖ



**ಕೊಪ್ಪಳ** : ಐತಿಹಾಸಿಕ ಘಟನೆಗಳನ್ನು ದಾಖಲು ಮಾಡುವುದರಲ್ಲಿ ಛಾಯಾಗ್ರಹಣದ ಪಾತ್ರ ಪ್ರಮುಖವಾಗಿದೆ ಹಾಗೂ ಅತಿ ಅವಶ್ಯಕವಾಗಿದೆ ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ.ರವಿ ಹೇಳಿದರು.

ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಪತ್ರಿಕೋದ್ಯಮದಲ್ಲಿ ಛಾಯಾಚಿತ್ರದ ಮಹತ್ವದ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು ವಿಶೇಷ ರೀತಿಯಿಂದ ಫೋಟೋ ತೆಗೆಯುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಛಾಯಾಚಿತ್ರ ಪತ್ರಿಕೋದ್ಯಮವು ಕುತೂಹಲ ಮೂಡಿಸುವ ಒಂದು ವಿಷಯವಾಗಿದೆ. ಪತ್ರಿಕೋದ್ಯಮಕ್ಕೆ ಛಾಯಾಚಿತ್ರದ ಕೊಡುಗೆ ಅಪಾರವಾಗಿದ್ದು, ಇತ್ತೀಚಿನ ಆಧುನಿಕ ತಂತ್ರಜ್ಞಾನದಿಂದ ಛಾಯಾಚಿತ್ರ ಪತ್ರಿಕೋದ್ಯಮವು ಮತ್ತಷ್ಟು ಹೊಸ ಆಯಾಮ ಅಳವಡಿಸಿಕೊಂಡಿದೆ ಎಂದರು.

ನಂತರ ಫೋಟೋ ಜರ್ನಲಿಸ್ಟ್ ವಿಶ್ವನಾಥ್ ಸುವರ್ಣ ವಿಶೇಷ ಉಪನ್ಯಾಸ ನೀಡಿದರು ಒಂದು ಫೋಟೋ ಸಾವಿರಾರು ಪದಗಳಿಗೆ ಸಮಾನವಾಗಿದೆ. ಛಾಯಾಗ್ರಾಹಕರಿಗೆ ತಾಳ್ಮೆ, ಸಮಯದ ಪ್ರಜ್ಞೆ ಹಾಗೂ ಪರಿಕಲ್ಪನೆ ಅತಿ ಅವಶ್ಯಕವಾಗಿದೆ ಎಂದರು. ಬಳಿಕ ಛಾಯಾಚಿತ್ರದ ಪತ್ರಿಕೋದ್ಯಮದ ಕುರಿತು, ಅದರಲ್ಲಿ ಅವರು ಅನುಭವದ ಕುರಿತು ವಿದ್ಯಾರ್ಥಿಗಳೊಂದಿಗೆ ಮಾಹಿತಿ ಹಂಚಿಕೊಂಡರು. ಅವರು ಸೆರೆ ಹಿಡಿದ ಫೋಟೋಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿದರು.

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರಕಾಶ ಯಳವಟ್ಟಿ ಮತ್ತು ಅಧ್ಯಾಪಕರಾದ ಜಡೆಯಪ್ಪ, ಚಾಂದ್ ಬಾಷಾ, ಸಂತೋಷ ಕುಮಾರ, ಶ್ರೀಕಾಂತ್, ರಂಗಪ್ಪ, ಪಾರ್ವತಿ, ಅಯ್ಯಪ್ಪ, ಪ್ರವೀಣ್ ಪೊಲೀಸ್ ಪಟೇಲ್ ಸೇರಿದಂತೆ ಇತರರು ಇದ್ದರು. ಸೈನಜಾ ಬೇಗಂ ಸ್ವಾಗತಿಸಿದರು ಮತ್ತು ಪದ್ಮಜಾ ನಿರೂಪಿಸಿದರು. ಅಶ್ವಿನಿ ವಂದಿಸಿದರು.

# ದೇಶಭಿಮಾನ ಬೆಳೆಸುವಲ್ಲಿ ಶಿಕ್ಷಕರ ಪಾತ್ರ ದೊಡ್ಡದು: ಕುಲಪತಿ ಪ್ರೊ.ಬಿ.ಕೆ ರವಿ



**ಕೊಪ್ಪಳ :** ದೇಶಕ್ಕಾಗಿ ಮತ್ತು ನಾಡಿಗಾಗಿ ಮಡಿದ ವೀರರ ಬಗ್ಗೆ ಗೌರವ ಮತ್ತು ದೇಶಾಭಿಮಾನ ಬೆಳಸುವಲ್ಲಿ ಶಿಕ್ಷಕರ ಪಾತ್ರ ಬಹಳ ದೊಡ್ಡದು ಎಂದು ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಿ.ಕೆ ರವಿ ಅವರು ಹೇಳಿದರು.

ಅವರು ಭಾನುವಾರ ಕೊಪ್ಪಳ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೇರವೇರಿಸಿ ಮಾತನಾಡಿದರು.

ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣ ತ್ಯಗ ಮಾಡಿದ ಸಂಗೋಳ್ಳಿ ರಾಯಣ್ಣನಂತಹ ದೇಶಭಕ್ತರ ಬಗ್ಗೆ ಶಿಕ್ಷಕರು ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಮೂಲಕ ವೃತ್ತಿ ಗೌರವ ತೋರಬೇಕು. ಯುವಕರು ಇಂದು ದೇಶದ ಅಭಿವೃದ್ಧಿಗಾಗಿ ಉತ್ತಮ ಶಿಕ್ಷಣ ಪಡೆಯುವ ಮೂಲಕ ತಾಂತ್ರಿಕಕ್ಷೇತ್ರವನ್ನುಬಲಪಡಿಸುತ್ತಿರುವುದುಶ್ಲಾಘನೀಯ. ಬಹುತ್ವಭಾರತದಲ್ಲಿಎಲ್ಲರಿಗೂಸಮಾನಅವಕಾಶಗಳಿದ್ದು ಅವುಗಳನ್ನು ಸದುಪಯೋಗ ಪಡಿಸಿಕೊಳ್ಳವುದರ ಮೂಲಕಆರ್ಥಿಕಸ್ಥಿರತೆಮತ್ತುಸಮಸಮಾಜನಿರ್ಮಾಣ ಮಾಡುವ ಹೊಣೆಗಾರಿಕೆಯನ್ನು ಹೊಂದಬೇಕಾಗಿದೆ, ಬಾಬಾ ಸಾಹೇಬ್ ಅಂಬೇಡ್ಕರವರು ನೀಡಿದ ಸಂವಿಧಾನದ ಆಶಯದಂತೆ ಸರ್ವರನ್ನು ಸಮಾನವಾಗಿ ಕಾಣವ ನಿಷ್ಕಲ್ಮಷ ಗುಣ ಬೆಳಸಿಕೊಳ್ಳವುದರ ಮೂಲಕ ಗಣರಾಜ್ಯೋತ್ಸವದ ಘನತೆಯನ್ನು ಹೆಚ್ಚಿಸೋಣ ಎಂದರು.

ರಾಜ್ಯಶಾಸ್ತ್ರದಉಪನ್ಯಾಸಕಸುಧಾಕರಅವರುನಿರೂಪಣೆ ಮಾಡಿದರು. ಕೊಪ್ಪಳ ವಿಶ್ವವಿದ್ಯಾಲಯದ ನಿರ್ದೇಶಕ ಪ್ರೊ.ಪ್ರಕಾಶ ಯಳವಟ್ಟಿ, ಪ್ರಾಧ್ಯಾಪಕ ಚಾಂದ್ ಬಾಷಾ ಮತ್ತು ವಿವಿಧ ವಿಭಾಗಗಳ ಉಪನ್ಯಾಸಕರು ಸೇರಿದಂತೆ ಇತರರು ಇದ್ದರು.

# ಮೈಕ್ರೋ ಫೈನಾನ್ಸ್ ಹಾವಳಿ ವಿರುದ್ಧ ಕಠಿಣ ಕ್ರಮ: ಸಚಿವ ಎಂ.ಬಿ. ಪಾಟೀಲ



**ವಿಜಯಪುರ :** ಮೈಕ್ರೋ ಫೈನಾನ್ಸ್ ಹಾವಳಿ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಮೈಕ್ರೋ ಫೈನಾನ್ಸ್ ಹಾವಳಿ ವಿಚಾರ ಬಗ್ಗೆ ನಗರದಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಫೈನಾನ್ಸ್ ಹಾವಳಿ ಅತಿಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಠಿಣ ಕ್ರಮಕೈಗೊಳ್ಳಲು ಕ್ಯಾಬಿನೆಟ್‌ನಲ್ಲಿ ತಿಳಿಸಿದ್ದಾರೆ. ಹೀಗಾಗಿ ಅತ್ಯಂತ ಕಠಿಣ ಕಾನೂನು ತರುತ್ತೇವೆ ಎಂದರು.

ಮೈಕ್ರೊ ಫೈನಾನ್ಸ್ ಹಾವಳಿ ವಿರುದ್ಧ ಬಿಲ್ ಬಗ್ಗೆ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ಅವರ ಬಿಲ್ ಏನಾಯ್ತು ಎಂದು ಟಾಂಗ್ ನೀಡಿ, ಕುಮಾರಸ್ವಾಮಿ ಬಿಲ್ ವರ್ಕ್ ಆಗ್ತಿಲ್ಲ. ಹೀಗಾಗಿ ನಾವು ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಸಚಿವ ಸಂಪುಟ ವಿಸ್ತರಣೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಹೈ ಕಮಾಂಡ್‌ಗೆ ಬಿಟ್ಟಿದ್ದು, ಸಂಪುಟ ವಿಸ್ತರಣೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರಮಾಧಿಕಾರ ಇರುತ್ತದೆ. ನನಗೆ ಕೇಳಿದರೆ ನಾನೇನು ಹೇಳಲಿ ? ಎಂದರು.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕ್ಲಿನ್ ಚೀಟ್ ವಿಚಾರಕ್ಕೆ ಪ್ರತಿಕ್ರಿಯೆ ನೀಡಿ, ಲೋಕಾಯುಕ್ತರ ಮೇಲೆ ಬಿಜೆಪಿಗೆ ವಿಶ್ವಾಸ ಇಲ್ಲವೆ? ಲೋಕಾಯುಕ್ತರು ನಿರ್ಣಯ ಕೊಟ್ಟಮೇಲೆ ಸಿಬಿಐ ಕೇಸ್ ಏನು ಎಂಬುವುದು ಗೊತ್ತಾಗುತ್ತದೆ ಎಂದರು.

# ವೃತ್ತಿಯ ಆಚೆಗೂ ಬಂಧುತ್ವ ಗಟ್ಟಿಯಾಗಲಿ: ಹೃಷಿಕೇಶ ಬಹದ್ದೂರ



**ಬೆಳಗಾವಿ :** 'ಪತ್ರಕರ್ತರಲ್ಲಿ ವೃತ್ತಿಪರ ಸ್ಪರ್ಧೆ ಇರುವುದು ಸಹಜ ಮತ್ತು ಆರೋಗ್ಯಕರ ಬೆಳವಣಿಗೆ. ವೃತ್ತಿಯ ಆಚೆಗೆ ನಾವೆಲ್ಲರೂ ಒಂದೇ ಎಂಬ ಭಾವತೋರಣದಲ್ಲಿ ಬಂಧಿಯಾಗಬೇಕು. ಆಗ ಮಾತ್ರ ಸಕಾರಾತ್ಮಕ ಬೆಳವಣಿಗೆಗಳು ಸಾಧ್ಯ' ಎಂದು ಹಿರಿಯ ಪತ್ರಕರ್ತ ಹೃಷಿಕೇಶ ಬಹದ್ದೂರ ದೇಸಾಯಿ ಕಿವಿಮಾತು ಹೇಳಿದರು.ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ 2024ನೇ ಸಾಲಿನ ಪ್ರಶಸ್ತಿ ಪಡೆದ ಹಿನ್ನೆಲೆಯಲ್ಲಿ, ಬೆಳಗಾವಿ ಪತ್ರಕರ್ತರ ಬಳಗದಿಂದ ಇಲ್ಲಿನ ವಾರ್ತಾ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.'ನಮ್ಮ ನಡುವೆ ಸಾಕಷ್ಟು ಪ್ರತಿಭಾವಂತ, ಸೃಜನಾತ್ಮ ಬರವಣಿಗೆ ರೂಢಿಸಿಕೊಂಡ ಯುವ ಪತ್ರಕರ್ತರಿದ್ದಾರೆ. ಅವರಿಗೆ ಪ್ರೋತ್ಸಾಹ ನೀಡುವ ಕೆಲಸವಾಗಬೇಕು. ಬೆಂಗಳೂರು, ಮಂಗಳೂರು, ಮೈಸೂರು ಮಾತ್ರವಲ್ಲ; ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪತ್ರಕರ್ತರಾಗಿ ಕೆಲಸ ಮಾಡಲು ಮುಂದೆ ಬರಬೇಕು. ಅದಕ್ಕೆ ಪ್ರೋತ್ಸಾಹದಾಯಕ ಹೆಜ್ಜೆ ಇಡುವ ಯತ್ನಗಳು ಪತ್ರಕರ್ತರಿಂದಲೇ ಮೊದಲಾಗಬೇಕು' ಎಂದೂ ಹೇಳಿದರು.'ಪತ್ರಕರ್ತರು ಸರಿಯಾದ ಪಥದಲ್ಲಿ ತಮ್ಮ ವೃತ್ತಿ ನಿಭಾಯಿಸುವ ಜತೆಗೆ, ಸಂಕಷ್ಟದಲ್ಲಿ ಇರುವ ಪತ್ರಕರ್ತರ ನೆರವಿಗೂ ಧಾವಿಸಬೇಕು. ಮಾಧ್ಯಮ ಮಿತ್ರರನ್ನು ಅಭದ್ರತೆ ಭಾವದಲ್ಲಿ ಇರುತ್ತಾರೆ. ಅನಾರೋಗ್ಯ, ಅಪಘಾತ ಮತ್ತಿತರ ಗಂಭೀರ ಸಮಸ್ಯೆಗೆ ಸಿಲುಕಿದರೆ ಮಾನಸಿಕವಾಗಿ ಕುಗ್ಗುತ್ತಾರೆ. ಕೆಲವೊಮ್ಮೆ ಪತ್ರಕರ್ತರನ್ನೇ ನೆಚ್ಚಿಕೊಂಡಿದ್ದ ಅವರ ಕುಟುಂಬಗಳು ನಾನಾ ಸಮಸ್ಯೆ ಎದುರಿಸುತ್ತವೆ. ಆಗ ಪ್ರತಿಯೊಬ್ಬರೂ ಸಹಾಯವನ್ನಾದರೂ ಮಾಡಬೇಕು. ಸಂಘಟನೆಯೇ ನಮ್ಮ ಬಲವಾಗಬೇಕು. ಎಲ್ಲರೂ ಒಂದಾಗಿ, ನೊಂದವರಿಗೆ ಬೆನ್ನಿಗೆ ನಿಲ್ಲಬೇಕಿದೆ' ಎಂದು ತಿಳಿಸಿದರು.'ನನಗೆ ಸಂದ ಪ್ರಶಸ್ತಿ ನನಗಷ್ಟೇ ಅಲ್ಲ; ಇಡೀ ಬೆಳಗಾವಿ ಜಿಲ್ಲೆಗೆ ಸೇರಿದ್ದು' ಎಂದೂ ಹೇಳಿದರು.

ಕರ್ನಾಟಕ ಮಾಧ್ಯಮ ಮಾನ್ಯತಾ ಸಮಿತಿಯ ಸದಸ್ಯರಾಗಿ ನೇಮಕಗೊಂಡ ಶ್ರೀಕಾಂತ ಕುಬಕಡ್ಡಿ, 'ರಾಜಕೀಯ, ಶಿಕ್ಷಣ, ಪತ್ರಿಕೋದ್ಯಮ ಮಾತ್ರವಲ್ಲ; ಎಲ್ಲ ರಂಗಗಳಲ್ಲೂ ದೊಡ್ಡ ಸದ್ದು ಮಾಡುವ ಜಿಲ್ಲೆ ಬೆಳಗಾವಿ. ಇಲ್ಲಿನ ಪತ್ರಿಕಾ ರಂಗದ ಹಿರಿಯರು ಕಿರಿಯರನ್ನು ಬೆಳೆಸುತ್ತ ಬಂದಿದ್ದಾರೆ. ಇತ್ತೀಚಿನ ದಿನಗಳಲ್ಲಿ ಉತ್ತರ ಕರ್ನಾಟಕದ ಪತ್ರಕರ್ತರನ್ನೂ ಸರ್ಕಾರ ಗುರುತಿಸುತ್ತಿರುವುದು ಆಶಾದಾಯಕ ಬೆಳವಣಿಗೆ' ಎಂದರು.

ಅಕಾಡೆಮಿಯಿಂದ ಅತ್ಯುತ್ತಮ ಕೃಷಿ ವರದಿ ಪ್ರಶಸ್ತಿ ಹಿರಿಯ ಪತ್ರಕರ್ತೆ ಕೀರ್ತಿ ಶೇಖರ ಕಾಸರಗೋಡು, 'ಹೊಸ ವರ್ಷದ ಆರಂಭದಲ್ಲೇ ಸಾಲು ಸಾಲಾಗಿ ಪುರಸ್ಕಾರ ಸಿಕ್ಕಿದ್ದಷ್ಟೇ ಖುಷಿಯಾಗಿದೆ. ಬೆಳಗಾವಿಯಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುವ ಮೂವರು ಪತ್ರಕರ್ತರಿಗೆ ಪ್ರತಿವರ್ಷ ಪ್ರಶಸ್ತಿ ನೀಡಿ ಗೌರವಿಸಬೇಕು. ಈ ಪೈಕಿ ಒಂದು ಪ್ರಶಸ್ತಿಯನ್ನು ಮಹಿಳೆಗೆ ಮೀಸಲಿರಿಸಬೇಕು. ಅದಕ್ಕೆ ನಾನು ವೈಯಕ್ತಿಕವಾಗಿ ದತ್ತಿನಿಧಿ ಕೊಡುವೆ' ಎಂದು ತಿಳಿಸಿದರು.ಅಕಾಡೆಮಿಯ 2024ನೇ ಸಾಲಿನ ಪ್ರಶಸ್ತಿ ಪಡೆದ ಪತ್ರಕರ್ತ ಪುಂಡಲೀಕ ಬಾಳೋಜಿ, 'ಪ್ರಶಸ್ತಿಯಿಂದ ನನ್ನ ಜವಾಬ್ದಾರಿ ಹೆಚ್ಚಿದೆ. ಅದನ್ನು ನಿಭಾಯಿಸಲು ಪ್ರಯತ್ನಿಸುವೆ' ಎಂದರು.ಅಧ್ಯಕ್ಷತೆ ವಹಿಸಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಗುರುನಾಥ ಕಡಬೂರ ಮಾತನಾಡಿದರು. ಹಿರಿಯ ಪತ್ರಕರ್ತ ಕೆ.ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪತ್ರಕರ್ತರಾದ ಮೆಹಬೂಬ್ ಮಕಾನದಾರ, ಮುನ್ನಾ ಬಾಗವಾನ, ಬ್ರಹ್ಮಾನಂದ ಹಡಗಲಿ, ಮಲ್ಲಿಕಾರ್ಜುನ ಮುಗಳಿ, ಮುರುಗೇಶ ಶಿವಪೂಜಿ, ಶ್ರೀಶೈಲ ಮಠದ,

ಲೂಯಿಸ್ ರಾಡ್ರಿಗ್ಸ್, ಭೈರೋಬಾ ಕಾಂಬಳೆ, ಕುಂತಿನಾಥ ಕಲಮನಿ ಮತ್ತಿತರರು ಮಾತನಾಡಿದರು. ರವಿ ಉಪ್ಪಾರ ನಿರೂಪಿಸಿದರು.

# ಜಿನಭಜನಾ ಸ್ಪರ್ಧೆ: ಬೆಳಗಾವಿ ವಿಶಾರದ ನೃತ್ಯ ಶಾಲಾ ತಂಡ ಪ್ರಥಮ



**ಬೆಳಗಾವಿ :** ಇತ್ತಿಚಿಗೆ ಬೆಂಗಳೂರಿನಲ್ಲಿ ನಡೆದ ಧಾರ್ಮಿಕ ರಾಜ್ಯ ಮಟ್ಟದ ಜಿನ ಭಜನಾ ಸ್ಪರ್ಧೆಯಲ್ಲಿ ಕಿರಿಯರ ವಿಭಾಗದಲ್ಲಿ ಬೆಳಗಾವಿಯ ವಿಶಾರದ ನೃತ್ಯ ಶಾಲಾ ತಂಡದ ಮಕ್ಕಳು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡು ದಾಖಲೆ ನಿರ್ಮಿಸಿದ್ದಾರೆ.

ಧರ್ಮಸ್ಥಳದ ಅನಿತಾ ಸುರೇಂದ್ರಕುಮಾರ ಹೆಗಡೆ ಅವರ ನೇತೃತ್ವದಲ್ಲಿ ಕಳೆದ 8 ವರ್ಷಗಳಿಂದ ರಾಜ್ಯಮಟ್ಟದ ಜಿನಭಜನಾ ಸ್ಪರ್ಧೆಯನ್ನು ಆಯೋಜಿಸಲಾಗುತ್ತಿದೆ. ಈ ಬಾರಿ ನಡೆದ ಸ್ಪರ್ಧೆಯಲ್ಲಿ ಬೆಳಗಾವಿಯ ವಿಶಾರದ ನೃತ್ಯ ಶಾಲಾ ಮಕ್ಕಳು ಧಾರವಾಡ ವಲಯ ವಿಭಾಗದಿಂದ ಆಯ್ಕೆಯಾಗಿ ಅಂತಿಮ ಸುತ್ತಿನಲ್ಲಿ ಪ್ರವೇಶ ಪಡೆದುಕೊಂಡರು.

ತದ ನಂತರ ಇತ್ತಿಚಿಗೆ ಬೆಂಗಳೂರಿನ ಜ್ಞಾನದೀಪ ಸಭಾಂಗಣದಲ್ಲಿ ನಡೆದ ಅಂತಿಮ ಸ್ಪರ್ಧೆಯಲ್ಲಿ ವಿಶಾರದ ನೃತ್ಯ ಶಾಲಾ ತಂಡ ಅತ್ಯುತ್ತಮ ಹಾಡಿಗಾರಿಕೆಯನ್ನು ಪ್ರದರ್ಶಿಸಿ ಗೆಲವು ಸಾಧಿಸುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದುಕೊಂಡಿದೆ.

ಈ ತಂಡದಲ್ಲಿದ್ದ ಕುಮಾರಿ ಅನರ್ಘ್ಯ, ಕುಮಾರಿ, ಮಧುರಾ ,ಕುಮಾರಿ ಪ್ರಾಚಿ, ಕುಮಾರಿ. ಧೃತಿ ಮತ್ತು ಕುಮಾರಿ ಶ್ರೀಣಿಕಾ ಇವರ ಹಾಡಿದ ಭಜನೆ ಎಲ್ಲ ತಿರ್ಪುಗಾರರ ಮತ್ತು ಸಭಾಂಗಣದಲ್ಲಿ ನೆರೆದಿದ್ದ ಎಲ್ಲ ಸಭಿಕರ ಮನಗೆದ್ದರು.

ವಿಜೇತ ವಿಶಾರದ ನೃತ್ಯ ಶಾಲಾ ಮಕ್ಕಳಿಗೆ ಜಿನವಾಣಿ ಪ್ರತಿಮೆ, ಪ್ರಶಸ್ತಿ ಪತ್ರ ಹಾಗೂ ನಗದು ಬಹುಮಾನ ನೀಡಿ ಗೌರವಿಸಲಾಯಿತು. ಇವರಿಗೆ ಸಂಗೀತ ಗುರುಗಳಾದ ಅಶೋಕ ಕಟ್ಟಿ ಮತ್ತು ತಬಲಾ ಸಾಥ ಚಂದ್ರಕಾಂತ ನಿರಗುಡು ಇವರು ಸಹಕರಿಸಿದರು.ಇವರಿಗೆ ಪ್ರೇಮಾ ಶಾಂತಿನಾಥ ಉಪಾಧ್ಯೆ ಇವರ ಮಾರ್ಗದರ್ಶನ ಲಭಿಸಿದೆ.

# ಸಮೀರವಾಡಿ ಗೋದಾವರಿ ಬಯೋರಿಫೈನರಿಜ್ ಲಿಮಿಟೆಡ್ ಮಜದೂರ ಯೂನಿಯನ್ ಕಚೇರಿಯಲ್ಲಿ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣ



**ಸಮೀರವಾಡಿ :** ಜಿಲ್ಲೆ ರಬಕವಿ–ಬನಹಟ್ಟಿ ತಾಲೂಕಿನ ಸೈದಾಪುರ –ಸಮೀರವಾಡಿ ಭಾರತ ಜಾತ್ಯಾತೀತ ರಾಷ್ಟ್ರ. ಎಲ್ಲ ಪ್ರಜೆಗಳಿಗೂ ಸಮಾನ ಹಕ್ಕಿದೆ. ಶಿಕ್ಷಣ, ಸಮಾನತೆ, ವಾಕ್ ಸ್ವಾತಂತ್ರ್ಯ ಹಕ್ಕುಗಳು, ಇಚ್ಛೆಯ ಧರ್ಮವನ್ನುಸ್ವೀಕರಿಸುವಹಕ್ಕುಗಳು,ಎಲ್ಲಿಬೇಕಾದರೂ ಜೀವಿಸಬಹುದೆಂದು ಮಜದೂರ್ ಯೂನಿಯನ್ ಕಾರ್ಯಾಧ್ಯಕ್ಷರಾದಬಸುಮೇಲಪ್ಪಗೋಳಹೇಳಿದರು ಸಮೀರವಾಡಿ ಗೋದಾವರಿ ಬಯೋರಿಫೈನರಿಜ್ ಲಿಮಿಟೆಡ್ ಮಜದೂರ ಯೂನಿಯನ್ ಕಚೇರಿಯಲ್ಲಿ 76ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿ ಸ್ವತಂತ್ರ ಹಕ್ಕುಗಳು ಎಲ್ಲರಿಗೂ ಇರುವುದು ಭಾರತದಲ್ಲಿ ಮಾತ್ರ 1950 ರ ಜನವರಿ 26 ರಂದು ಜಾರಿಗೆ ಬಂದ ಸಂವಿಧಾನ. ಆದ್ದರಿಂದ ಪ್ರತಿ ವರ್ಷವು ಸಹ ಈ ದಿನವನ್ನು ಭಾರತೀಯ ಪ್ರಜೆಗಳು ಎಲ್ಲೇ ಇದ್ದರೂ ಸಹ ನೆನೆಯಬೇಕಾಗಿದೆ.

ಹಾಗೆಯೇ ಆಚರಣೆ ಮಾಡಬೇಕಿದೆ. ಕಾನೂನಾತ್ಮಕವಾಗಿ ಈ ದಿನವನ್ನು ರಾಷ್ಟ್ರದೆಲ್ಲೆಡೆ ರಕ್ಷಣಾ ಪಡೆಗಳು ಪರೇಡ್ ಮಾಡುವ ಮೂಲಕ, ಶಾಲೆಗಳು, ಸರ್ಕಾರಿ ಕಚೇರಿಗಳಲ್ಲಿ ಧ್ವಜಾರೋಹಣ ಮಾಡುವ ಮೂಲಕ ಸಂವಿಧಾನ ಜಾರಿಗೆ ಬಂದ ದಿನವನ್ನು ಗಣರಾಜ್ಯೋತ್ಸವ ದಿನವಾಗಿ ಆಚರಣೆ ಮಾಡಲಾಗುತ್ತದೆಂದು ಹೇಳಿದರು.ಮುಖ್ಯ ಅತಿಥಿಗಳಾಗಿ ಸೋಮಶೇಖರ್ ಪೇಟಿಮನಿ ಮಾತನಾಡಿ 76ನೇ ಗಣರಾಜ್ಯೋತ್ಸವ ಭಾರತ ಸಂವಿಧಾನವು 1949 ರ ನವೆಂಬರ್ 26 ರಂದು ಅಂಗೀಕಾರವಾಯಿತು. 1950 ರ ಜನವರಿ 26 ರಂದು ಭಾರತದಲ್ಲಿ ಸಂವಿಧಾನ ಜಾರಿಗೆ ಬಂತು. ಈ ದಿನದ ಗೌರವಾರ್ಥವಾಗಿ ಪ್ರತಿ ವರ್ಷ ಜನವರಿ 26 ರಂದು ಭಾರತದಲ್ಲಿ ಗಣರಾಜ್ಯೋತ್ಸವ ದಿನವಾಗಿ ಆಚರಣೆ ಮಾಡಲಾಗುತ್ತದೆ.

ಭಾರತ ಗಣರಾಜ್ಯ ರಾಷ್ಟ್ರವಾಗಲೂ, ಸಂವಿಧಾನ ಜಾರಿಗೆ ತರಲು ಶ್ರಮಿಸಿದ ಮಹಾನ್ ವ್ಯಕ್ತಿಗಳನ್ನು ನೆನೆಯುವ ದಿನ. ಅವರಿಗೆ ಸಹೃದಯದಿಂದ ನಮಿಸುವ ದಿನವೂ ಹೌದು.ಭಾರತದಲ್ಲಿ ಸಂವಿಧಾನ ಜಾರಿಗೆ ಬಂದ ಕಾರಣದಿಂದಲೇ ದೇಶದ ಪ್ರತಿ ಪ್ರಜೆಯೂ ಶಿಕ್ಷಣದ ಹಕ್ಕು, ಪ್ರತಿಯೊಬ್ಬರಿಗೂ ಬೇಕಾದ ಮೂಲಭೂತ ಹಕ್ಕು, ಧಾರ್ಮಿಕ ಹಕ್ಕು, ಇತರೆ ಹಲವು ಹಕ್ಕುಗಳು ಸಿಕ್ಕಿರುವುದು. ಅದಕ್ಕೆ ಎಲ್ಲರೂ ಗೌರವಿಸಿ ಅದರ ನಿಯಮಗಳನ್ನು ಪಾಲಿಸಬೇಕು. ನಾವು ಇಂದು ಜಾಗತಿಕವಾಗಿ ಏನೆಲ್ಲಾ ಬದಲಾವಣೆಗಳನ್ನು ನೋಡಿದ್ದೇವೆ ಅಲ್ಲವೇ. ಮುಂದೆ ಇನ್ನೂ ಹಲವು ಬದಲಾವಣೆಗಳನ್ನು, ಅಭಿವೃದ್ಧಿಯ ಕ್ಷೇತ್ರದಲ್ಲಿ ನೋಡುತ್ತೇವೆ. ಅದು ತಾಂತ್ರಿಕ ಜಗತ್ತು ಆಗಿರಬಹುದು, ಶಿಕ್ಷಣ ನೀಡುವ ಮಾದರಿ ಆಗಿರಬಹುದು, ಜೀವಿಸುವ ವಿಧಾನವು ಆಗಿರಬೇಕು. ಆದರೆ ಭಾರತೀಯರಾದ ನಾವು ಎಷ್ಟೇ ಬದಲಾವಣೆ ಕಂಡರೂ ಸಹ ನಮ್ಮ ಅಸ್ತಿತ್ವಕ್ಕೆ ಅತ್ಯುತ್ತಮ ಕಾನೂನುಗಳನ್ನು ರೂಪಿಸಿರುವ ಸಂವಿಧಾನ ಜಾರಿಗೆ ಬಂದ ದಿನವನ್ನು ಮಾತ್ರ ಮರೆಯಬಾರದು.ಸ್ವಾತಂತ್ರ್ಯ, ಸಮಾನತೆ, ಏಕತೆ, ಭ್ರಾತೃತ್ವ, ಸಹೋದರತ್ವ, ನಮ್ಮ ಸಂವಿಧಾನದಲ್ಲಿ ಇರುವ ಪ್ರಮುಖ ಮೌಲ್ಯಗಳಾಗಿವೆ. ಇಂತಹ ಮೌಲ್ಯಗಳನ್ನು ನೀಡಿದ ಸಂವಿಧಾನ ಜಾರಿಗೆ ಬಂದ ದಿನದ ಈ ರಾಷ್ಟ್ರೀಯ ಹಬ್ಬವೆಂದು ಹೇಳಿದರು.

ಈ ಸಮಯದಲ್ಲಿ ಇಂಜಿನಿಯರ್ ಜಿಎಂ ವಿ ಕೆ ಕಿಲಾರಿ.ಡಿಜಿಎಂ ಅಮಿತ ತ್ರಿಪಾಟಿ.ಸೂರ್ಯಬಾಬು. ಎಜಿಎಂಪಿಎ ಮತ್ತು ಐ ಆರ್ ಎಂ ರಾಮಚಂದ್ರ. ಡೆಫುಟಿ ಮ್ಯಾನೇಜರ್ ಆನಂದ ಕೊಟಬಾಗಿ. ಮಜದೂರ ಯೂನಿಯನ್ ಉಪಾಧ್ಯಕ್ಷ ಕೆ ಜಿ ವಾಜೇಂತ್ರಿ. ಪ್ರಧಾನ ಕಾರ್ಯದರ್ಶಿ ಎನ್ ಪಿ ಮಾಳಿ. ಎಸ್ ಬಿ ಬಿ ಪಾಟೀಲ. ಸಿ ಎಂ ಅಥಣಿ. ವಿ ಎಸ್ ಕಮತೆ. ರವಿ ಕುರಬರ. ಅಲೀಮ. ಅರಬ. ಬಾಹುಬಲಿ ಆಲಗೊರ. ಮಹಾಲಿಂಗ ಚಿಂಚಲಿ. ಶಿವು ಕೆಂಚಿಗಾರ. ಮನೋಹರ್ ಬಡಿವಾಳ.

ಪಕೀರಪ್ಪ ವಗ್ಗರ ಎಸ್ ಎಂ ಹಿರೇಮಠ.ಮುರಿಗೆಪ್ಪ ಮಾಲಗಾರ.ಈಶ್ವರ ಕುಳ್ಳೊಳ್ಳಿ. ಜೆ ಎಸ್ ರೆಂಟಿ. ಎಲ್ಲಾ ಕಾರ್ಮಿಕ ಬಂಧುಗಳು ಮತ್ತು ಶಾಲಾ ಮುದ್ದು ವಿದ್ಯಾರ್ಥಿಗಳು ಹಾಗೂ ಸೇರಿದಂತೆ ಸುಗಮವಾಗಿ ಕಾರ್ಯಕ್ರಮ ನೆರವೇರಿತು.

# ಆರ್ಮಿ ಪಬ್ಲಿಕ್ ಸ್ಕೂಲ್: ಬೋದಕ–ಬೋದಕೇತರ ಸಿಬ್ಬಂದಿಗಳ ನೇಮಕಾತಿಗಾಗಿ ಅರ್ಜಿ ಆಹ್ವಾನ

**ಬೆಳಗಾವಿ :** ಮರಾಠಾ ಲೈಟ್ ಇನ್ಫಂಟ್ರಿ ರೆಜಿಮೆಂಟಲ್ ಸೆಂಟರ್ ನಿರ್ವಹಿಸುವ ಬೆಳಗಾವಿಯ ಆರ್ಮಿ ಪಬ್ಲಿಕ್ ಸ್ಕೂಲ್ ಬೋದಕ ಹಾಗೂ ಬೋದಕೇತರ ಸಿಬ್ಬಂದಿಗಳ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಹತೆ ಮತ್ತು ಅರ್ಜಿ ಪ್ರಕ್ರಿಯೆ ಮಾಹಿತಿ ಪಡೆಯಲು ವೆಬ್‌ಸೈಟ್ https://www.apsbelagavi.in ಗೆ ಭೇಟಿ ನೀಡಬಹುದಾಗಿದೆ. ಫೆಬ್ರವರಿ 06, 2025, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಅಂತರ ವಿವಿ ಕ್ರಿಕೆಟ್ ಕ್ರೀಡಾಕೂಟ: ಮಹಿಳಾ ವಿವಿ ವಿದ್ಯಾರ್ಥಿನಿಯರು ಭಾಗಿ



**ವಿಜಯಪುರ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 2024–25ನೇ ಕ್ರಿಕೆಟ್ ಕ್ರೀಡಾಪಟುಗಳು ದಕ್ಷಿಣ ಭಾರತ ಅಂತರ ವಿಶ್ವವಿದ್ಯಾಲಯದ ಕ್ರೀಡೆಗೆ ಆಯ್ಕೆಯಾಗಿದ್ದು, ದಕ್ಷಿಣ ಭಾರತ ಅಂತರ ವಿಶ್ವವಿದ್ಯಾಲಯ ಕ್ರಿಕೆಟ್ ಕ್ರೀಡೆಯು ಜ.23 ರಿಂದ 28ರವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಜರುಗಲಿದೆ.

ಈ ಕ್ರೀಡಾಕೂಟದಲ್ಲಿ ಮಹಿಳಾ ವಿವಿಯ ಕ್ರೀಡಾಪಟುಗಳು ಭಾಗವಹಿಸುತ್ತಿದ್ದು, ತಂಡದ ತರಬೇತಿದಾರರಾಗಿ ಕವಿತಾ ರಾಠೋಡ ಮತ್ತು ವ್ಯವಸ್ಥಾಪಕರಾಗಿ ಜಬಿನತಾಜ ಜಿಗಳೂರ ಭಾಗವಹಿಸಲಿದ್ದಾರೆ. ಆಯ್ಕೆಯಾಗಿರುವ ಕ್ರೀಡಾಪಟುಗಳ ತಂಡಕ್ಕೆ ವಿವಿಯ ಹಂಗಾಮಿ ಕುಲಪತಿ ಪ್ರೊ. ಶಾಂತಾದೇವಿ ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ. ಎಚ್.ಎಂ.ಚಂದ್ರಶೇಖರ,ಕ್ರೀಡಾನಿರ್ದೇಶನಾಲಯದ ನಿರ್ದೇಶಕ ಡಾ. ಹನುಮಂತಯ್ಯ ಪೂಜಾರ, ಸಹ ನಿರ್ದೇಶಕ ವಿಶ್ವನಾಥ ನಡಕಟ್ಟಿ, ಕ್ರೀಡಾ ವಿಭಾಗದ ಮುಖ್ಯಸ್ಥ ಪ್ರೊ. ಸಕ್ಪಾಲ್ ಹೂವಣ್ಣ ಮತ್ತು ಡಾ. ಕಿರಣ ಜಿ.ಎನ್. ಶುಭ ಹಾರೈಸಿದ್ದಾರೆ.

# ಸಚಿವ ಎಂ.ಬಿ. ಪಾಟೀಲ ಜಿಲ್ಲಾ ಆಸ್ಪತ್ರೆಗೆ ಭೇಟಿ, ಗಾಯಾಳು ಕಾರ್ಮಿಕರ ಆರೋಗ್ಯ ವಿಚಾರಣೆ



**ವಿಜಯಪುರ :** ನಗರ ಹೊರ ವಲಯದ ಇಟ್ಟಂಗಿ ಭಟ್ಟಿಯಲ್ಲಿ ಹಲ್ಲೆಗೊಳಗಾಗಿ ಚಿಕಿತ್ಸೆಪಡೆಯುತ್ತಿರುವ ಕಾರ್ಮಿಕರು ಇನ್ನು ಮುಂದೆ ಬೇರೆ ಕಡೆ ಕೆಲಸಕ್ಕೆ ಹೋಗಬೇಕಿಲ್ಲ. ಅವರಿಗೆ ಮಾಜಿ ಶಾಸಕ ಆನಂದನ್ಯಾಮಗೌಡ ಅವರ ಸಕ್ಕರೆ ಕಾರ್ಖಾನೆ ಅಥವಾ ಬಿ.ಎಲ್.ಡಿ.ಇ ಸಂಸ್ಥೆಯಲ್ಲಿ ಕೆಲಸ ಕೊಡಿಸುವುದಾಗಿ ಕೈಗಾರಿಕೆ, ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ.ಪಾಟೀಲ ಅಭಯ ನೀಡಿದ್ದಾರೆ.

ಶನಿವಾರ ವಿಜಯಪುರ 'ಜಿಲ್ಲಾಸ್ಪತ್ರೆಗೆ ತೆರಳಿ ಗಾಯಾಳು ಕಾರ್ಮಿಕರನ್ನು ಭೇಟಿ ಮಾಡಿದ ಸಚಿವರು ಸಾಂತ್ವನ ಹೇಳಿ ವೈಯಕ್ತಿಕವಾಗಿ ತಲಾ ರೂ.50,000 ಆರ್ಥಿಕ ನೆರವು ನೀಡಿದರು. ಅಲ್ಲದೇ, ನೀವು ಇನ್ನು ಮುಂದೆ ಜಮಖಂಡಿ ತಾಲೂಕಿನಲ್ಲಿ ಕೆಲಸ ಮಾಡಲು ಉದ್ಯೋಗ ಕೊಡಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ಕಾರ್ಮಿಕರಿಂದ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು ಅವರಿಗೆ ಆತ್ಮಸ್ಥೈರ್ಯ ತುಂಬಿದರು. ನಿಮಗೆ ಸರಕಾರದಿಂದಸಕಲನೆರವುಒದಗಿಸಲುಕ್ರಮ ಕೈಗೊಳ್ಳುತ್ತೇನೆ. ಸರಕಾರನಿಮ್ಮೊಂದಿಗಿದೆ. ಯಾರೂ ಆತಂಕ ಪಡುವ ಅಗತ್ಯವಿಲ್ಲ. ತಪ್ಪಿತಸ್ಥರಿಗೆ ಬುದ್ದಿ ಕಲಿಸಲು ಕಾನೂನಿನಡಿ ಕಠಿಣ ಕ್ರಮಕೈಗೊಳ್ಳಲಾಗುವುದು. ಹೀಗಾಗಿ ಘಟನೆಯ ಆಘಾತದಿಂದ ಹೊರಬರಬೇಕು.ನಿಮ್ಮೊಂದಿಗೆ ನಾವಿದ್ದೇವೆ ಎಂದು ಧೈರ್ಯ ಹೇಳಿದರು.

ಬಳಿಕ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸಚಿವರು, ಆರೋಪಿಗಳು ಹೇಯ ಕೃತ್ಯ ಮಾಡುವ ಮೂಲಕ ದೌರ್ಜನ್ಯ ಎಸಗಿದ್ದಾರೆ.

ಈ ಘಟನೆ ಬೆಳಕಿಗೆ ಬಂದಾಗ ನಾನು ಬೆಂಗಳೂರಿನಲ್ಲಿ ಸಭೆಯಲ್ಲಿದ್ದೆ. ವಿಜಯಪುರ ಜಿಲ್ಲಾಧಿಕಾರಿಗಳು ಸಭೆಯಲ್ಲಿದ್ದರು. ತಕ್ಷಣ ವಿಜಯಪುರ ಎಸ್ಪಿಯವರೊಂದಿಗೆ ಮಾತನಾಡಿ ಆರೋಪಿಗಳನ್ನು ಕೂಡಲೇ ಬಂಧಿಸುವಂತೆ ಸೂಚನೆ ನೀಡಿದ್ದೇನೆ. ಘಟನೆಯ ಬಳಿಕ ಭಯ ಮತ್ತು ಆಘಾತದಲ್ಲಿದ್ದ ಕಾರ್ಮಿಕರು ತಕ್ಷಣ ದೂರು ನೀಡಿಲ್ಲ. ಹೀಗಾಗಿ ಘಟನೆ ಗಮನಕ್ಕೆ ಬಂದ ನಂತರ ಪೊಲೀಸರು ತನಿಖೆನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಯಾರೇ ತಪ್ಪಿತಸ್ಥರಿದ್ದರೂ ಅವರ ವಿರುದ್ಧವೂ ಕ್ರಮಕೈಗೊಳ್ಳಲಾಗುವುದು. ಮೊದಲು ಈ ಕಾರ್ಮಿಕರನ್ನು ಘಟನೆಯ ಆಘಾತದಿಂದ ಹೊರತರಲಾಗುವುದು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಜಿ.ಪಂ. ಸಿಇಒ ರಿಷಿ ಆನಂದ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಶಿವಾನಂದ ಮಾಸ್ತಿಹೊಳಿ, ಡಾ. ಮಹಾಂತೇಶ ಬಿರಾದಾರ, ವಿಜಯಪುರ ಗ್ರಾಮೀಣ ಸಿಪಿಐ ರಾಯಗೊಂಡ ಜಾನರ, ಮುಖಂಡರಾದ ಅಡಿವೆಪ್ಪ ಸಾಲಗಲ್, ಷಹಜಹಾನ ಮುಲ್ಲಾ, ನಾನಾ ಅಧಿಕಾರಿಗಳು ಉಪಸ್ಥಿತರಿದ್ದರು.

# ಜ್ಯೋತಿರ್ಲಿಂಗ ಹೊನಕಟ್ಟಿಗೆ ಜಾನಪದ ಗಾರುಡಿಗ ಪ್ರಶಸ್ತಿ



**ತಾಳಿಕೋಟೆ:** ಬೆಂಗಳೂರಿನಲ್ಲಿ ಪೊಲೀಸ್ ಇಲಾಖೆಯ ಸಿ.ಪಿ.ಐ. ಡಾ.ಜ್ಯೋತಿರ್ಲಿಂಗ ಹೊನಕಟ್ಟಿ ಅವರಿಗೆ ರಾಜ್ಯದ ಪ್ರತಿಷ್ಠಿತ ಮಠವಾದ ಮುಗಳಖೋಡದ ಜಿಡಗಾ ಮಠದ ವತಿಯಿಂದ ಜಾನಪದ ಗಾರುಡಿಗ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಜ್ಯೋತಿರ್ಲಿಂಗ ಹೊನಕಟ್ಟಿ ಅವರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರೂ ಕೂಡಾ ಜಾನಪದ ಸಾಹಿತ್ಯದ ಮೇಲಿನ ಅಭಿರುಚಿ ಅಲ್ಲದೇ ಅವರು ರಾಜ್ಯದ ಮೂಲೆ ಮೂಲೆಗಳಲ್ಲಿಯೂ ಜಾನಪದ ಸಾಹಿತ್ಯ ಉಳಿವಿಗಾಗಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಮುಗಳಖೋಡ ಜಿಡಗಾ ಮಠದ ಪೀಠಾಧಿಪತಿ ಪ.ಪೂ.ಶ್ರೀ ಷಡಕ್ಷರಿ ಶಿವಯೋಗಿ ಡಾ.ಮುರುಘರಾಜೇಂದ್ರ ಮಹಾಸ್ವಾಮಿಗಳು ಶ್ರೀಮಠದ ಸದ್ಗುರು ಶ್ರೀ ಯಲ್ಲಾಲಿಂಗ ಮಹಾಸ್ವಾಮಿಗಳವರ 39ನೇ ಪುಣ್ಯಾರಾಧನೆ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಾರೆ.

# ಯುವ ಮತದಾರರು ಆಮಿಷಕ್ಕೆ ಒಳಗಾಗಬೇಡಿ: ನ್ಯಾಯಾಧೀಶ ಶಿವಾಜಿ ನಲವಡೆ



**ವಿಜಯಪುರ :** ಪ್ರಥಮ ಬಾರಿಗೆ ಮತದಾನ ಮಾಡುವ ಯುವ ಜನತೆ ಆಮಿಷಕ್ಕೆ ಒಳಗಾಗದೇ ಮತದಾನ ಮಾಡಬೇಕು ಎಂದು ಪ್ರಧಾನ ಸತ್ರ ನ್ಯಾಯಾಧೀಶ ಶಿವಾಜಿ ನಲವಡೆ ಹೇಳಿದರು.

ನಗರದ ಜಿಲ್ಲಾ ಪಂಚಾಯತಿ ಸಭಾ ಭವನದಲ್ಲಿ ಶನಿವಾರ ರಾಷ್ಟ್ರೀಯ ಮತದಾನ ದಿನಾಚರಣೆ ಅಂಗವಾಗಿ ಆಯೋಜಿಸಿದ ಕಾರ್ಯಕ್ರಮದ ಉದ್ಘಾಟಿಸಿ ಮಾತನಾಡಿದ ಅವರು, ರಾಜಕೀಯ ವ್ಯವಸ್ಥೆ ಕೆಟ್ಟಿದೆ ಎಂದು ದೂರುತ್ತಾ ಕೂಡುವ ಬದಲು ಯೋಗ್ಯರನ್ನು ಆಯ್ಕೆ ಮಾಡುವ ಕಾರ್ಯ ಯುವ ಮತದಾರರಿಂದ ನಡೆಯಬೇಕು ಎಂದು ಅವರು ಯುವ ಜನತೆಗೆ ಕರೆಕೊಟ್ಟರು.

ಚುನಾವಣೆಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮತದಾನರು ಭಾಗಿಯಾಗುವುದರಿಂದ ಜನಪರ ಸರ್ಕಾರ ಆಡಳಿತಕ್ಕೆ ಬರಲು ಸಾಧ್ಯ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಟಿ. ಭೂಬಾಲನ್ ಮಾತನಾಡಿ, ಚುನಾವಣಾ ಆಯೋಗ ಕಳೆದ 15 ವರ್ಷಗಳಿಂದ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನಾಗಿ ಪ್ರತಿ ಜನವರಿ 25 ನ್ನು ಆಚರಿಸುತ್ತ ಬಂದಿದ್ದು, ಮತದಾರರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿದ ಎಲ್ಲಾ ಅಧಿಕಾರಿಗಳು ಅದರಲ್ಲಿಯೂ ಬೂತ್ ಮಟ್ಟದ ಅಧಿಕಾರಿಗಳು, ಮಾಸ್ಟರ್ ಟ್ರೈನರ್ಗಳು, ಸ್ವೀಪ್ ಚಟುವಟಿಕೆಗಳಲ್ಲಿ ಭಾಗವಹಿಸಿದ ಎಲ್ಲಾ ಅಧಿಕಾರಿಗಳಿಗೆ ನಮ್ಮ ಜಿಲ್ಲೆಯಲ್ಲಿ ಮತದಾನ ಪ್ರಮಾಣ ಹೆಚ್ಚಲು ಕಾರಣವಾದ ಕಾರಣ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇ ರೀತಿ ಮುಂದೆ ನಡೆಯಲಿರುವ ಎಲ್ಲಾ ಚುನಾವಣೆಗಳಲ್ಲಿಯೂಉತ್ತಮವಾದಂತಹ ಮತದಾನದ ಪ್ರಮಾಣ ಹೆಚ್ಚಿಸುವ ಕಾರ್ಯಕ್ಕೆ ಎಲ್ಲರೂ ಪ್ರಯತ್ನಿಸೋಣ. ಎಲ್ಲಾ ಚುನಾವಣೆಗಳಲ್ಲಿಯೂ ಉತ್ತಮ ಪ್ರಮಾಣದ ಮತದಾನ ನಡೆಯುವ ಹಾಗೇ ಶ್ರಮಿಸೋಣ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಆರ್.ಸಿ. ಹಿರೇಮಠ ಮಾತನಾಡಿ, ಒಂದೇ ಒಂದು ಮತ ಇಡೀ ಚುನಾವಣೆಯ ಫಲಿತಾಂಶವನ್ನೇ ಬದಲಾವಣೆ ಮಾಡಿದ ಅನೇಕ ಉದಾಹರಣೆಗಳಿವೆ. ಹಾಗಾಗಿ ಎಲ್ಲರೂ ಮತದಾನ ಪ್ರಕ್ರಿಯೆಯಲ್ಲಿ ಭಾಗಿಯಾಗಬೇಕೆಂದು ಹೇಳಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಿ; ಮತದಾನ ಪ್ರಮಾಣ ಹೆಚ್ಚಲು ಕಾರಣವಾದ ಎಲ್ಲಾ ಅಧಿಕಾರಿಗಳಿಗೆ ಜಿಲ್ಲಾಡಳಿತದಿಂದ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರಬಂಧ, ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ಬಹುಮಾನ ವಿತರಿಸಲಾಯಿತು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನ್ಯಾ. ಅರವಿಂದ ಹಂಗರಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಿಷಿ ಆನಂದ, ಸೈನಿಕ ಶಾಲೆಯ ಪ್ರಾಂಶುಪಾಲರಾದ ಪ್ರತಿಭಾ ಭೀಷ್ಟ, ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ, ಜಿಲ್ಲಾ ಪಂಚಾಯತ ವಿವಿಧ ಶಾಖೆಯ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

# ಸಿದ್ಧಾರೂಢರ ಜ್ಯೋತಿಯಾತ್ರೆಗೆ ಭವ್ಯ ಸ್ವಾಗತ–ಬೀಳ್ಕೊಡುಗೆ



**ಮಹಾಲಿಂಗಪುರ :** ಸಿದ್ಧಾರೂಢರ ಕಥಾಮೃತ ಶತಮಾನೋತ್ಸವ ಹಾಗೂ ಹುಬ್ಬಳ್ಳಿ ಸಿದ್ಧಾರೂಢ ಮಠದಲ್ಲಿನ ವಿಶ್ವ ವೇದಾಂತ ಪರಿಷತ್ತಿನ ಅಂಗವಾಗಿ ಚಳಕಾಪೂರದಿಂದ ಹುಬ್ಬಳ್ಳಿವರೆಗೆ ನಡೆಯುತ್ತಿರುವ ಸಿದ್ಧಾರೂಢರ ಜ್ಯೋತಿ ಯಾತ್ರೆಗೆ ರವಿವಾರ ಸಂಜೆ ಮಹಾಲಿಂಗಪುರ ಪಟ್ಟಣದಲ್ಲಿ ಭವ್ಯ ಸ್ವಾಗತ ಕೋರಲಾಯಿತು.

ಬುದ್ನಿಪಿಡಿ ಸಿದ್ಧಾರೂಢ, ಮಲ್ಲಮ್ಮ, ವೇಮನ ತ್ರಿವಳಿ ದೇವಸ್ಥಾನದಲ್ಲಿ ಜ್ಯೋತಿ ರಥಕ್ಕೆ ಸಹಜಾನಂದ ಸ್ವಾಮಿಜಿ ಪೂಜೆ ಸಲ್ಲಿಸಿ ಸ್ವಾಗತಿಸಿದರು. ನಂತರ ಮೆರವಣಿಗೆ ಮೂಲಕ ಸಿದ್ಧಾರೂಢ ಬ್ರಹ್ಮ ವಿದ್ಯಾಶ್ರಮಕ್ಕೆ ಸ್ವಾಗತಿಸಲಾಯಿತು. ನಂತರ ಧರ್ಮಸಭೆ ನಡೆಸಿ ಸಿದ್ಧಾರೂಢ ಜ್ಯೋತಿ ಯಾತ್ರೆಯು ಡಿ.23ರಂದು ಚಳಕಾಪುರದಿಂದ ಪ್ರಾರಂಭವಾಗಿದೆ. ಪೆಬ್ರುವರಿ 19ರಂದು ಹುಬ್ಬಳ್ಳಿ ತಲುಪಲಿದೆ. ಜ್ಯೋತಿ ಯಾತ್ರೆಯ ಉದ್ದೇಶಗಳು ಮತ್ತು ಫೆ.19ರಂದು ಹುಬ್ಬಳ್ಳಿಯಲ್ಲಿ ಸಿದ್ಧಾರೂಢ ಕಥಾಮೃತದ ಶತಮಾನೋತ್ಸವ ಕಾರ್ಯಕ್ರಮ ಹಾಗೂ ಸಿದ್ಧಾರೂಢರ ಪವಾಡಗಳ ಕುರಿತು ಉಪಸ್ಥಿತ ಪೂಜ್ಯರು ಪ್ರವಚನ ನೀಡಿದರು.

ಭವ್ಯ ಮೆರವಣಿಗೆ:

ಸೋಮವಾರ ಮುಂಜಾನೆ 9–30ಕ್ಕೆ ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದಿಂದ ಚನ್ನಮ್ಮ ವೃತ್ತ, ಗಾಂಧಿ ವೃತ್ತ, ಜವಳಿ ಬಜಾರ, ನಡಚೌಕಿ, ಡಬಲ್ ರಸ್ತೆ ಮಾರ್ಗವಾಗಿ ಬಸವೇಶ್ವರ ವೃತ್ತದವರೆಗೆ ಕರಡಿ ಮಜಲು, ಮಹಿಳೆಯರ ಆರತಿಯೊಂದಿಗೆ ಸಿದ್ಧಾರೂಢರ ಜ್ಯೋತಿಯ ರಥದ ಭವ್ಯ ಮೆರವಣಿಗೆ ನಡೆಸಿ ರನ್ನಬೆಳಗಲಿ–ಮುಧೋಳಕ್ಕೆ ಬೀಳ್ಕೊಡಲಾಯಿತು.

ಸಿದ್ಧಾರೂಢ ಬ್ರಹ್ಮವಿದ್ಯಾಶ್ರಮದ ಪೀಠಾಧಿಪತಿ ಸಹಜಾನಂದ ಸ್ವಾಮಿಜಿ, ಉತ್ತರಾಧಿಕಾರಿ ಸಿದ್ಧಾನಂದ ಭಾರತಿ ಸ್ವಾಮಿಜಿ, ಹೊಸೂರಿನ ಪರಮಾನಂದ ಸ್ವಾಮಿಜಿ, ಟ್ರಸ್ಟ್ ಕಮಿಟಿ ಉಪಾಧ್ಯಕ್ಷ ಡಾ.ಬಿ.ಡಿ.ಸೋರಗಾಂವಿ, ಕಾರ್ಯದರ್ಶಿ ಚಂದ್ರಶೇಖರ ಮೋರೆ, ಖಜಾಂಚಿ ಅಲ್ಲಪ್ಪ ಗುಂಜಿಗಾಂವಿ, ಧರ್ಮದರ್ಶಿಗಳಾದ ಎಂ.ಎಂ.ಕಟಗಿ, ಚೇತನ ಹಾದಿಮನಿ, ಲಕ್ಕಪ್ಪ ಚಮಕೇರಿ, ಸದ್ಭಕ್ತರಾದ ಚನ್ನಪ್ಪ ಪಟ್ಟಣಶೆಟ್ಟಿ, ಜಿ.ಎಸ್.ಬರಗಿ, ಶ್ರೀಶೈಲಪ್ಪ ಬಾಡನವರ, ಮಹೇಶ ಇಟಕನ್ನವರ, ಯಲ್ಲನಗೌಡ ಪಾಟೀಲ, ಹಣಮಂತ ಮೀರಾಪಟ್ಟಿ, ಶ್ರೀಶೈಲಪ್ಪ ಉಳ್ಳೇಗಡ್ಡಿ, ಮಹೇಶ ಬಡಿಗೇರ, ಗೌಡಪ್ಪಗೌಡ ಪಾಟೀಲ, ಎಂ.ಎಸ್.ಧಡೂತಿ, ಮಹಾಂತೇಶ ಘಟ್ನಟ್ಟಿ, ಮಲ್ಲಪ್ಪ ಯಾದವಾಡ, ಸಿದ್ರಾಮಯ್ಯ ಗೋಠೆ, ಶಿವಾನಂದ ಬಡಿಗೇರ, ಶಿವಲಿಂಗ ತೇಲಿ, ಶ್ರೀಕಾಂತ ಪರೀಟ, ಅಶೋಕ ಬಾಣಕಾರ, ಶಿವಲಿಂಗ ಟಿರ್ಕಿ, ಶಿವಾನಂದ ಚಂಡೋಲ, ಬಸವಾನಂದ ಜಿಟ್ಟಿ, ಶಂಕರ ನಿಲಾರಿ, ಮೆಹಬೂಬ ಸನದಿ, ಕುಮಾರ ಉಳ್ಳೇಗಡ್ಡಿ, ರಾಜೇಂದ್ರ ಮಿರ್ಜಿ, ಚನಮಲ್ಲ ಕರಡಿ, ಗಂಗಪ್ಪ ಕರಡಿ, ಸಿದ್ದು ಧಡೂತಿ, ಸಂಗಪ್ಪ ಮೇಸ್ತ್ರಿ, ಚನ್ನಪ್ಪ ಗೂಗಾಡ ಸೇರಿದಂತೆ ಹಲವರು ಇದ್ದರು.

# ಅರಕೇರಿ ಗ್ರಾಮದಲ್ಲಿ 76ನೇ ಗಣರಾಜ್ಯೋತ್ಸವ



**ಬೀಳಗಿ :** ತಾಲೂಕಿನ ಅರಕೇರಿ ಗ್ರಾಮದಲ್ಲಿ 76ನೇ ಗಣರಾಜ್ಯೋತ್ಸವವನ್ನು ಸಡಗರ, ಸಂಭ್ರಮದಿಂದ ಆಚರಿಸಲಾಯಿತು.

ಗ್ರಾಪಂ ಕಾರ್ಯಾಲಯದಲ್ಲಿ ಗ್ರಾಪಂ ಅಧ್ಯಕ್ಷೆ ಕಾಶವ್ವ ಆಗೋಜಿ ಧ್ವಜಾರೋಹಣ ನೇರವೇರಿಸಿದರು.

ಸರಕಾರಿ ಬಾಲಕಿಯರ ಪ್ರಾಥಮಿಕ ಶಾಲೆಯಲ್ಲಿ ಎಸ್ ಡಿಎಂಸಿ ಅಧ್ಯಕ್ಷ ಮಲ್ಲಪ್ಪ ಮಮದಾಪೂರ,

ಶ್ರೀಮತಿ ಎಂ ಎಂ ಸಾವಕಾರ ಸರಕಾರಿ ಪ್ರೌಢ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ರಾಮಚಂದ್ರ ಕಟ್ಟಿ, ಸರಕಾರಿ ಬಾಲಕರ ಪ್ರಾಥಮಿಕ ಶಾಲೆಯಲ್ಲಿ ಸುರೇಶ ಅಂಟೀನ, ಡಿಪಿಇಪಿ ಶಾಲೆಯಲ್ಲಿ ನಾಗಪ್ಪ ನಡಗೇರಿ, ಆಯುರ್ವೇದ ಆಸ್ಪತ್ರೆಯಲ್ಲಿ ಗಿರಿಜಾ ಚಿಗರಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಲ್ಲಿ ಅಧ್ಯಕ್ಷ ಬಶೆಟ್ಟಿ ಅಂಟೀನ ಧ್ವಜಾರೋಹಣ ನೆರವೇರಿಸಿದರು.

ಶಾಲಾ ಮಕ್ಕಳಿಂದ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳು ಜರುಗಿದವು.

ಕಜಾಪ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ, ಎಸ್ ಡಿಎಂಸಿ ಅಧ್ಯಕ್ಷ ಬಸವರಾಜ ಸಾವಕಾರ ಮಾತನಾಡಿದರು.

ಗ್ರಾಪಂ ಉಪಾಧ್ಯಕ್ಷ ಬಿ. ಎಸ್. ಬಿಸನಾಳ, ಮುಖ್ಯೋಪಾಧ್ಯಾಯರಾದ ಬಿ. ಎಸ್. ಭೂಷಣ್ಣವರ, ಬಿ. ಎಂ. ಮನಗೂಳಿ, ಐ. ಎಚ್. ಬಳಿಗಾರ, ಪಿಡಿಒ ಗುರುನಾಥ ಅರಳಿಕಟ್ಟಿ, ಕಾರ್ಯದರ್ಶಿ ಶಿವು ಕುಂದರಗಿ, ಹಿರಿಯರಾದ

ಜಿ. ಟಿ. ಬೆನಕಟ್ಟಿ, ಮುದಕಪ್ಪ ಮಲ್ಲಾರ, ಲಲಿತಾ ಗೊಣ್ಣಾಗರ, ರಂಗವ್ವ ಮಲ್ಲಾರ, ಎ ಎಸ್. ಪಾಟೀಲ, ಆರ್. ಎಚ್. ಚಂಡಕಿ, ಆರ್. ಎಂ. ಸಾವಕಾರ, ಬಸು ಹೊಸಂಗಡಿ,

ಎಚ್. ಬಿ. ಆಗೋಜಿ, ಕಲ್ಲಪ್ಪ ಆಲಗುಂಡಿ, ಹನಮಂತ ಗಾಣಗೇರ, ಹನಮಂತ ತೆಗ್ಗೆನ್ನವರ, ಹನಮಂತ ತಳವಾರ, ವಿ.ಡಿ. ಬೆನಕಟ್ಟಿ, ವಿಠ್ಠಲ ಕಮ್ಮನ್ನವರ ಹಾಗೂ ಗ್ರಾಪಂ ಸದಸ್ಯರು, ಎಸ್ ಡಿಎಂಸಿ ಪದಾಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಮುಧೋಳದ ದಲಿತ ಗಲ್ಲಿಗಳಲ್ಲಿ ಶ್ರೀಗಳ ಪಾದಯಾತ್ರೆ

## ದೀನ ದುರ್ಬಲರನ್ನು ಕಡೆಗಣಿಸದಿರಿ: ಅರವಿಂದರಾವ ದೇಶಪಾಂಡೆ



**ಮುಧೋಳ :** ದೀನ ದುರ್ಬಲರನ್ನು, ವಿಕಲಚೇತರನ್ನು, ವಿಶೇಷ ಅಗತ್ಯವುಳ್ಳ ವರನ್ನು ಸಮಾಜದಲ್ಲಿ ಕಡೆಗಣಿಸಬಾರದು ಎಂದು ಆರ್.ಎಸ್.ಎಸ್ ನ ಉತ್ತರ ಪ್ರಾಂತ ಕಾರ್ಯ ಕಾರಿಣಿ ಸದಸ್ಯ ಅರವಿಂದರಾವ್ ದೇಶಪಾಂಡೆ ತಿಳಿಸಿದರು.

ಅವರು ಶನಿವಾರ ಇಲ್ಲಿನ ಅರುಣ ಚೇತನ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ವಾರ್ಷಿಕೋತ್ಸವ ಹಾಗೂ ಸಾಮೂಹಿಕ ಹುಟ್ಟುಹಬ್ಬ ಆಚರಣೆ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಸೇವಾ ಭಾರತಿ ಹೆಸರಿನಲ್ಲಿ ಸಮಾಜದ ಎಲ್ಲ ಸ್ಥರಗಳಲ್ಲಿ ಸಂಘ ಕೆಲಸ ಮಾಡುತ್ತಿದ್ದೆ. ವನವಾಸಿ ಕಲ್ಯಾಣಾಶ್ರಮ ಸಂಘಟನೆಯು ಗುಡ್ಡಗಾಡು ಪ್ರದೇಶಗಳಲ್ಲಿ ವಾಸವಾಗಿರುವ ಬುಡಕಟ್ಟು ಜನಾಂಗದವರಿಗೆ ಶಿಕ್ಷಣ, ಅವರ ಸಂಸ್ಕೃತಿ ಸಂಪ್ರದಾಯ ಉಳಿಸಿ ಬೆಳೆಸುವ ಕೆಲಸವನ್ನು ಮಾಡುತ್ತಿದೆ, ಈ ರೀತಿ ಅಸಂಘಟಿತ ಹಾಗೂ ಸಂಘಟಿತ ಕಾರ್ಮಿಕರ ಕಲ್ಯಾಣ ಸೇರಿದಂತೆ ಸಂಘದ ಸುಮಾರು 164 ವಿವಿಧ ಸಂಘಟನೆಗಳು ಸಮಾಜದ ವಿವಿಧ ಸ್ಥರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಘ ಇಂದು ಸಮಾಜದ ಅವಿಭಾಜ್ಯ ಅಂಗವಾಗಿದೆ ಎಂದರು. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ವಿಶಿಷ್ಟ ರೀತಿಯ ಶಿಕ್ಷಣ ನೀಡಲು ಸಂಘದಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ. ದಲಿತರ ಕೇರಿಗಳಲ್ಲಿ ಸ್ವಾಮೀಜಿಗಳ ಪಾದಪೂಜೆಯಂಥ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಇಸ್ರೇಲ್ ಕೆಮಿಕಲ್ ಕಂಪನಿಯ ಕಾರ್ಯ ನಿರ್ವಾಹಕ ಅಧಿಕಾರಿ ಅನಂತ ಕುಲಕರ್ಣಿ ಮಾತನಾಡಿ ಸಮಾಜದಲ್ಲಿ ಇಂಥ ಕೆಲಸಗಳನ್ನು ಮಾಡುವ ಸಂಘಟನೆಗಳಿಗೆ ಧನಸಹಾಯ ಮಾಡಿದರೆ ಸಾರ್ಥಕವಾಗುತ್ತದೆ ಎಂದರು.

ಮುಧೋಳ ಗವಿಮಠ ವಿರಕ್ತ ಮಠದ ಶ್ರೀಗಳಾದ ಬಸವಲಿಂಗ ಮಹಾಸ್ವಾಮಿಗಳು, ರೂಗಿಯ ಅಡವಿ ಆಶ್ರಮದ ನಿತ್ಯಾನಂದ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪದ್ಮಾವತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸತೀಶ ಹಜಾರೆ, ಡಾ: ವೀರಣ್ಣ ಜತ್ತಿ, ಉಪಸ್ಥಿತರಿದ್ದರು. ಕಾರ್ಯಕ್ರಮ ಕ್ಕು ಮುಂಚೆ ದಲಿತಗಲ್ಲಿ ಗಲ್ಲಿಗಳಲ್ಲಿ ಶ್ರೀಗಳು ಪಾದಯಾತ್ರೆ ನಡೆಸಿದರು. ಪಾದಯಾತ್ರೆ ಸಂಧರ್ಭದಲ್ಲಿ ದಲಿತ ಗಲ್ಲಿಗಳಲ್ಲಿ ಶ್ರೀಗಳಿಗೆ ಪಾದಪೂಜೆ ,ಆರತಿ ಮಾಡಿ ಭವ್ಯ ಸ್ವಾಗತ ಕೋರಲಾಯಿತು. ದಲಿತ ಕೇರಿಯ ಪಕ್ಕದ ಬೀದಿಯವರು ನಮ್ಮ ಮನೆಗಳಿಗೂ ಬನ್ನಿ ಎಂದು ಶ್ರೀಗಳಿಗೆ ಆಹ್ವಾನಿಸಿದ ಕ್ಷಣ ಎಲ್ಲರ ಮನಮಿಡಿಯುವಂತಿತ್ತು. ಶ್ರೀಗಳು ಪ್ರತಿ ಮನೆಗಳ ಮುಂದೆಯೂ ಹೋಗಿ ಪಾದಪೂಜೆ ಆರತಿ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡು ಭಕ್ತರ ಕೋರಿಕೆಗೆ ಸಂತಸ ವ್ಯಕ್ತಪಡಿಸಿದರು. ರಾಮಕೃಷ್ಣ ಬುದ್ನಿ, ಲಾಲ್ ಸಿಂಗ್ ರಾಜಪುರೋಹಿತ, ಕುಶಾಲಗೌಡ ಪಾಟೀಲ, ಹಣಮಂತ ಸುಕಾಲಿ, ಕಿರಣ ಟಂಕಸಾಲಿ, ಮಲ್ಲಿಕಾರ್ಜುನ ಬಟಕುರ್ಕಿ, ಡಾ: ಜ್ಯೋತ್ಸ್ನಾ ಸಮಾಜ, ಡಾ: ಪ್ರಾಚಿ ರಿಸಬೂಡ ಸೇರಿದಂತೆ ಶಾಲಾ ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.

ಶ್ರೀಕಾಂತ ಸಂಕೇಶ್ವರ ವಾರ್ಷಿಕ ವರದಿ ವಾಚನ ಮಾಡಿದರು. ಸಂಸ್ಥೆಯ ಅಧ್ಯಕ್ಷ ಬಸವರಾಜ ಗೋಸಾರ ಸ್ವಾಗತಿಸಿದರು. ರವಿ ಕಮಲದಿನ್ನಿ ವಂದಿಸಿದರು.

# ಮಹಾದೇವಯ್ಯಾ ಬಾಬಯ್ಯ ಹಿರೇಮಠ ನಿಧನ



**ರಬಕವಿ :** ಇಲ್ಲಿಯ ಬಸವಾನುಯಾಯಿ, ಅಥಣಿ ಶಿವಯೋಗಿಗಳ ಮತ್ತು ಇಳಕಲ್ ಮಹಾಂತಜ್ಜನವರ ಪರಮ ಭಕ್ತರಾಗಿದ್ದ 'ಚಸ್ಮಾ ಸ್ವಾಮಿ' ಎಂದೇ ನಗರದಲ್ಲಿ ಖ್ಯಾತರಾಗಿದ್ದ ಚಾವಡಿ ಓಣಿಯ ಹಿರೇಮಠದಮಹಾದೇವಯ್ಯಾಬಾಬಯ್ಯಾ ಹಿರೇಮಠ ತಮ್ಮ 85 ನೆಯ ವಯಸ್ಸಿನಲ್ಲಿ ಸೋಮವಾರ ಜನೆವರಿ 27 ರಂದು ಲಿಂಗೈಕ್ಯರಾದರು. ಬ್ರಹ್ಮಚಾರಿಯಾಗಿದ್ದ ಮಹಾದೇವಯ್ಯನವರು ಧಾರ್ಮಿಕ ಕಾರ್ಯಗಳನ್ನು ನಡೆಸುತ್ತ ಜನೋಪಕಾರಿ ಜೀವನ ನಡೆಸಿದ್ದರು. ರಬಕವಿ ಹಿಂದೂ ರುದ್ರಭೂಮಿಯಲ್ಲಿ ರಬಕವಿ–ಮರೇಗುದ್ದಿಯ ಸಿದ್ಧರಾಮ ಮಹಾಸ್ವಾಮಿಗಳು ಬಸವಧರ್ಮ ಶೈವ ಪರಂಪರೆಯಲ್ಲಿ ವಿಧಿ ವಿಧಾನಗಳನ್ನು ಪೂರೈಸಿದರು. ವಿರಕ್ತಮಠ ಟ್ರಸ್ಟ್, ವಿವಿಧ ಸಮಾಜಗಳ ಮುಖಂಡರು ಶ್ರದ್ಧಾಂಜಲಿ ನುಡಿನಮನ ಸಲ್ಲಿಸಿದರು.

# ಬಸವರಾಜ ದಾವಣಗೆರೆಗೆ ಜಿಲ್ಲಾ ಪ್ರಶಸ್ತಿ



**ಬೀಳಗಿ :** ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾ ಆಡಳಿತದಿಂದ ಜರುಗಿದ 76 ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಜಾನಪದ ಪರಿಷತ್ ಅಧ್ಯಕ್ಷ, ಕುಂದರಗಿಯ ರಾಮಲಿಂಗೇಶ್ವರ ಪ್ರಾಥಮಿಕ ಶಾಲೆ ಶಿಕ್ಷಕ, ಸಂಘಟಕ, ನಿರೂಪಕ ಬಸವರಾಜ ದಾವಣಗೆರೆ ಇವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ ತಿಮ್ಮಾಪುರ ಪ್ರಶಸ್ತಿ ನೀಡಿ, ಸನ್ಮಾನಿಸಿದರು.

ಸಂಸದರಾದ ಪಿ. ಸಿ. ಗದ್ದಿಗೌಡರ, ನಾರಾಯಣಸಾ ಭಾಂಡಗೆ, ಶಾಸಕರಾದ ಹೆಚ್. ವೈ. ಮೇಟಿ, ಪಿ. ಹೆಚ್. ಪೂಜಾರ, ಹೆಚ್. ಆರ್. ನಿರಾಣಿ, ಜಿಲ್ಲಾಧಿಕಾರಿಗಳು, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State